ಟಿ. ವಿ. ಗಣೇಶಗುಡಿ

T.V. GANESHGUDI



ಚಂದ್ರಕಾಂತ ಕುಸನೂರ

ಕರ್ನಾಟಕ ಲಲಿತಕಲಾ ಅಕಾಡೆಮಿ
Karnataka Lalitkala Academy

ಟಿ.ವಿ. ಗಣೇಶಗುಡಿ

T.V. GANESHGUDI

ಚಂದ್ರಕಾಂತ ಕುಸನೂರ

ಕರ್ನಾಟಕ ಲಲಿತಕಲಾ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-560 002
ದೂರವಾಣಿ : 080-22480297
ಇ-ಮೇಲ್ : kla.karnataka@gmail.com

T.V. Ganeshgudi: A biography by Mallikarjun Jadav Published by H.G. Vijayalakshmi, Registrar, Karnataka Lalithakala Academy, Kannada Bhavana, J.C. Road, Bengaluru-560 002
Ph : 080-22480297

ಹಕ್ಕುಗಳು : ಕಾಯ್ದಿರಿಸಿದೆ

ಮುದ್ರಣ : 2010

ಪುಟಗಳು : 10+53+20

ಪ್ರತಿಗಳು : 1000

ಬೆಲೆ : 85.00

ಆಂಗ್ಲ ಅನುವಾದ : ಪ್ರೊ. ಎಚ್.ಎಸ್. ಹರಿಶಂಕರ್


ಸಂಯೋಜನೆ : ಎಸ್.ಎಂ. ಜಂಬುಕೇಶ್ವರ

ಪ್ರಕಾಶಕರು:

ಎಚ್.ಜಿ. ವಿಜಯಲಕ್ಷ್ಮಿ
ರಿಜಿಸ್ಟ್ರಾರ್, ಕರ್ನಾಟಕ ಲಲಿತಕಲಾ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು-560 002
ಇ-ಮೇಲ್ : kla.karnataka@gmail.com

ಮುದ್ರಕರು:

ಶ್ರೀ ಸಿದ್ಧಲಿಂಗೇಶ್ವರ ಗ್ರಾಫಿಕ್ಸ್
ನಂ. 914/1/2, 4ನೇ ಅಡ್ಡರಸ್ತೆ, 13 'ಎ' ಮುಖ್ಯರಸ್ತೆ
ಮಾರುತಿ ಸರ್ಕಲ್, ಹನುಮಂತನಗರ, ಬೆಂಗಳೂರು -19.
ಮೊ. : 9845373332, ಫೋ: 080-26622317/18/19/2
ಇ-ಮೇಲ್ : ssg@ssgraphicsdp.in www.ssgraphicsdp.in



ಅಧ್ಯಕ್ಷರ ಮಾತು

ಜಗತ್ತಿನ ವ್ಯಾಪಕಜ್ಞಾನ, ತಂತ್ರಜ್ಞಾನ ಮತ್ತು ಶೋಧನೆ– ಚಿಂತನೆಗಳನ್ನು ಸತ್ವಪೂರ್ಣವಾಗಿ ದಾಖಲಿಸುವ, ಓದುಗರ ಕಲಾ–ಜ್ಞಾನವನ್ನು ವಿಸ್ತರಿಸಿ ಅವರಲ್ಲಿ ಪುಸ್ತಕ ಸಂಸ್ಕೃತಿಯನ್ನು ಪ್ರಸರಿಸುವ ಕೆಲಸ ನಮ್ಮ ಅಕಾಡೆಮಿಯ ಮೂಲಕ ನಡೆಯುತ್ತಿದೆ. ಶ್ರವ್ಯ, ದ್ರವ್ಯ ಮತ್ತು ವಾಚನ ಸಾಮಗ್ರಿಗಳ ಸಮರ್ಪಕ ಉತ್ಪಾದನೆ ಮೂಲಕ ವಿತರಣಾ ಪ್ರಕ್ರಿಯೆಗಳನ್ನು ಅಕಾಡೆಮಿಯ 'ಕಲಾವಾರ್ತೆಯ' ಮೂಲಕ ಪ್ರಯತ್ನಿಸುತ್ತಿದೆ. ಈಗಾಗಲೇ ವೈವಿಧ್ಯಮಯ ಮತ್ತು ವೈಶಿಷ್ಟ್ಯಪೂರ್ಣ ಕೃತಿಗಳನ್ನು ಪ್ರಕಟಿಸುವುದರ ಮೂಲಕ ಅಂತರಂಗ ಹಾಗೂ ಬಹಿರಂಗ ಸೌಂದರ್ಯಗಳನ್ನು ಉಜ್ವಲಿಸುವ ಇದು ತನ್ನ ಮುಂದಿನ ಗುರಿಯ ಕಡೆಗೆ ಆಶಾದಾಯಕವಾಗಿ ಚಲಿಸುತ್ತಿದೆ ಎಂದು ಹೇಳಬಯಸಿದರೆ ಅತಿಶಯೋಕ್ತಿಯಾಗಲಾರದು.

ಕಲೆ ಎಲ್ಲರನ್ನು ಕೈಬೀಸಿ ಕರೆಯುತ್ತದೆ, ಆದರೆ ಕೆಲವರನ್ನು ಮಾತ್ರ ಆರಿಸಿಕೊಳ್ಳುತ್ತದೆ. ಎಂಬ ಮಾತು ಚರ್ಚೆಯಲ್ಲಿ ಇದೆ. ಈ ಮಾತು ಕಲೆಯ ಮಹತ್ವ, ವ್ಯಾಪ್ತಿ ಹಾಗೂ ವೈಶಿಷ್ಟ್ಯವನ್ನು ಅತ್ಯಂತ ಪರಿಣಾಮಕಾರಿಯಾಗಿ ಮತ್ತು ಶಕ್ತಿವತ್ತಾಗಿ ಅಭಿವ್ಯಕ್ತಿಸುತ್ತದೆ. ಒಂದರ್ಥದಲ್ಲಿ ಕಲೆ ತನ್ನ ಸತ್ವದ ಅಭಿವ್ಯಕ್ತಿಗಾಗಿ ಎಲ್ಲರನ್ನು ಆಹ್ವಾನಿಸಿದರೂ ಅದರ ಮೂಲ ತತ್ವವನ್ನು ಅರಿತು, ಅನುಭವಿಸಿ, ಧ್ಯಾನಿಸಿ, ಅನುಸಂಧಾನ ಮಾಡಿದ ನಂತರ ಅದರ ಆರಾಧನೆಯಲ್ಲಿ ತೊಡಗಿ ತಮ್ಮನ್ನು ಸಂಪೂರ್ಣವಾಗಿ ಅದಕ್ಕೆ ಅಂಟಿಕೊಂಡವರು ಬಹಳ ವಿರಳವೆಂದೇ ಹೇಳಬಹುದು. ಆದ್ದರಿಂದಲೆ ಕಲಾ ಕ್ಷೇತ್ರದಲ್ಲಿ ಪರಿಣಿತಿಯನ್ನು ಪಡೆಯುವವರು ಆ ಮೂಲಕ ವಿಭಿನ್ನ ಹಾಗೂ ವೈಶಿಷ್ಟ್ಯಪೂರ್ಣ ಕಲಾಕೃತಿಗಳನ್ನು ರಚಿಸುವವರ ಸಂಖ್ಯೆ ಕಡಿಮೆಯೆಂದೇ ತಿಳಿಯಬೇಕಾಗುತ್ತದೆ.

ಇಷ್ಟಾದರೂ ನಮ್ಮ ಪುರಾಣಗಳು, ಇತಿಹಾಸಗಳು, ಪುರಾತತ್ವ ದಾಖಲೆಗಳು ಭಾರತದಲ್ಲಿ ಅನಾದಿಕಾಲದಿಂದಲೂ; ಮಹತ್ವದ ಕಲಾಸಾಧಕರು ಇದ್ದುದನ್ನು ಮತ್ತು ಅಪೂರ್ವ ಕಲಾಕೃತಿಗಳನ್ನು ರಚಿಸಿದ್ದನ್ನು ಸಾದರಪಡಿಸುತ್ತವೆ. ಆಧುನಿಕ ಪಾರಂಪರಿಕ ಕಲೆಯ ಮಹೋನ್ನತಿಯನ್ನು ಮೈಗೂಡಿಸಿಕೊಳ್ಳುವುದರ ಜೊತೆಗೆ ಅನೇಕ ಕಾಲಘಟ್ಟಗಳಲ್ಲಿ ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿ ಮೈದೋರಿದ ಹೊಸ ಹೊಸ ಕಲಾಪಂಥಗಳನ್ನು, ಚಿಂತನೆಗಳನ್ನು, ತಂತ್ರಮಾಧ್ಯಮಗಳನ್ನು ರೂಢಿಸಿಕೊಂಡು ಬಹು ಪ್ರಸಿದ್ಧಿಯನ್ನು ಪಡೆದ ಕಲಾವಿದರು ನಮ್ಮಲ್ಲಿ ಇರುವುದು ಅಭಿಮಾನಪಡುವಂಥದ್ದು. ಆದರೆ ಈ ಕಲಾವಿದರ ಜೀವನ ಮತ್ತು ಸಾಧನೆಗಳು ಬಗೆಗಿನ ವಿದ್ವತ್ ಹಾಗೂ ಅಧಿಕೃತ ದಾಖಲೆಗಳು ಹೆಚ್ಚಿನ ಪ್ರಮಾಣದಲ್ಲಿ ದೊರೆಯದಿರುವುದು

ವಿಷಾದದ ಸಂಗಂತಿ. ಮತ್ತೊಂದೆಡೆ ಈ ಕ್ಷೇತ್ರದ ಮಹಾಸಾಧಕರನ್ನು, ಅವರ ಸಿದ್ಧಿ ಸಾಧನೆಗಳನ್ನು ಜೀವನದ ಏರಿಳಿತಗಳನ್ನು ಮತ್ತು ಅನುಭವಿಸಿದ ಸಾಕಷ್ಟು ಸಂತೋಷಗಳನ್ನು ಪರಿಚಯಿಸುವ ಗ್ರಂಥಗಳು ಅತ್ಯಲ್ಪವೇ ಎಂದು ಹೇಳಬಹುದು.

ತಮ್ಮೆಲ್ಲರಿಗೂ ತಿಳಿದಿರುವಂತೆ ಕರ್ನಾಟಕ ಲಲಿತಕಲಾ ಅಕಾಡೆಮಿಯು ವಿಶ್ವಭಾಷೆಯಾದ ದೃಶ್ಯಜ್ಞಾನವನ್ನು ಕನ್ನಡ ಭಾಷೆಯ ಮೂಲಕ ಪ್ರಚುರಗೊಳಿಸುವ ಕಾರ್ಯಕವನ್ನು ಪ್ರಾಯೋಗಿಕ ಚಟುವಟಿಕೆಗಳ ನಡುವೆಯೂ ಅತ್ಯಂತ ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದೆ. ಶ್ರೀ ಮಲ್ಲಿಕಾರ್ಜುನ ಜಾಧವ್ ಅವರು ರಚಿಸಿದ ಟಿ.ಪಿ. ಗಣೇಶಗುಡಿ ಅವರ ಕೃತಿಯನ್ನು ಅಕಾಡೆಮಿಯು ಪ್ರಕಟಿಸಲು ಹೆಮ್ಮೆಪಡುತ್ತದೆ. ಕೆಲವೇ ಮಾತುಗಳಲ್ಲಿ ಕಲಾವಿದರ ಸಾಧನೆಗಳನ್ನು ಬಿಂಬಿಸುವ ಕೌಶಲ ಇಲ್ಲಿ ಸುವ್ಯಕ್ತವಾಗಿವೆ. ಲೇಖಕರು ಸರಳವಾದ, ಎಲ್ಲರೂ ಪರಿಚಯ ಮಾಡಿಕೊಳ್ಳಲು ಅನುವುಮಾಡಿಕೊಟ್ಟಿದೆ. ಈ ಬರಹಗಳು ಕಲಾ ವಿದ್ಯಾರ್ಥಿಗಳಿಗೂ ಕಲಾಸಕ್ತರಿಗೂ ಬಹು ಉಪಯುಕ್ತವಾಗಿವೆ. ಇಂತಹ ವಿಶಿಷ್ಟ ಕೃತಿಯನ್ನು ಅಕಾಡೆಮಿಗೆ ಬರೆದುಕೊಟ್ಟ ಇವರಿಗೆ ನಮ್ಮ ಅಕಾಡೆಮಿಯ ಪರವಾಗಿ ಅಭಿನಂದನೆಗಳು ಸಲ್ಲುತ್ತವೆ.

ನಾಡೋಜ ಡಾ॥ ಜೆ.ಎಸ್. ಕಂಡೇರಾವ್

ಪರಿಚಯ

ನಾನು ಅದೇತಾನೆ ವಾಣಿಜ್ಯ ಕಲೆಯಲ್ಲಿ (ಅನ್ವಯ ಕಲೆಯಲ್ಲಿ) ಡಿಪ್ಲೊಮಾ ಪದವೀಧರನಾಗಿ ಹೊರಬಂದ ಕಾಲ. ಅದು 1969ನೇ ವರ್ಷ. ದಾವಣಗೆರೆ ಸರ್ಕಾರಿ ಕಲಾ ಮತ್ತು ಕರಕುಶಲ ಶಾಲೆಯ ಪ್ರಾರಂಭದ ವಿದ್ಯಾರ್ಥಿಯಾಗಿ ಅಭ್ಯಾಸ ಮುಗಿಸಿದ ನಾನು ಅದೇ ಕಾಲೇಜಿಗೆ ಉಪನ್ಯಾಸಕನಾಗುವ ಆಸೆಯಿಂದ ಸ್ಥಳೀಯ ಅಭ್ಯರ್ಥಿಯಾಗಿ ಸಂದರ್ಶನಕ್ಕೆ ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕರ ಕಛೇರಿಗೆ ಹೋದಾಗ ಅಲ್ಲಿಗೆ ಶಿಲ್ಪಕಲಾ ವಿಭಾಗದ ಉಪನ್ಯಾಸಕರ ಹುದ್ದೆಗೆ ಶ್ರೀಯುತ ಟಿ.ವಿ. ಗಣೇಶಗುಡಿಯವರು ಬಂದಾಗ ಅವರ ಪರಿಚಯವಾಯಿತು. ಗುಡಿಯವರ ಅಂದಿನ ಸಂದರ್ಶನಕ್ಕಾಗಿ ತಂದ ಶಿಲ್ಪಕಲಾಕೃತಿಗಳನ್ನು ನೋಡಿ ನಾನು ನಿಜಕ್ಕೂ ನಿಬ್ಬೆರಗಾದೆನು. ಅಂದಿನ ಅವರ ಉತ್ಸಾಹ, ಸ್ನೇಹಪರತೆ ಇವು ನನ್ನನ್ನು ಹಿಡಿದಿಟ್ಟುಕೊಂಡವು. ದೈವವಶಾತ್ ಶ್ರೀಯುತರು ಮತ್ತು ನಾನು ಈರ್ವರೂ ಸ್ಥಳೀಯ (Local) ಉಪನ್ಯಾಸಕರಾಗಿ ಆಯ್ಕೆಯಾಗಿ 1969ರ ಡಿಸೆಂಬರ್ ತಿಂಗಳಲ್ಲಿ ದಾವಣಗೆರೆಯ ಸರ್ಕಾರಿ ಕಲಾ ಮತ್ತು ಕರಕುಶಲ ಶಾಲೆಗೆ ಹಾಜರಾದೆವು. ಅಂದಿನಿಂದ ಶ್ರೀಯುತರ ಕೊನೆಯ ದಿನದವರೆಗೂ ನಾನು ಮತ್ತು ಅವರು ಆತ್ಮೀಯ ಮಿತ್ರರಾಗಿಯೇ ಇದ್ದು ಜೀವನದ ಎಷ್ಟೋ ಘಟನೆಗಳಲ್ಲಿ ಜೊತೆಜೊತೆಯಾಗಿಯೇ ಸಾಗಿದ್ದು, ನಮ್ಮ ವೃತ್ತಿಜೀವನದ ಕಾಲಾವಧಿಯಲ್ಲಿಯೂ ಸಹ ಜೊತೆಯಲ್ಲಿಯೇ ಸಾಗಿದೆವು.

ವಿದ್ಯಾರ್ಥಿಗಳಿಗೆ 'ಪ್ರಾಜೆಕ್ಟ್ ಕ್ಯಾಂಪ್' (ಹೊರಾಂಗಣ ಅಭ್ಯಾಸಕ್ಕಾಗಿ) ಪ್ರತಿ ಶನಿವಾರ ಲ್ಯಾಂಡ್‌ಸ್ಕೇಪ್, ಹೀಗೆ ಎಲ್ಲಾ ಕಲಾ ಚಟುವಟಿಕೆಗಳಲ್ಲಿ ನಿರಂತರವಾಗಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುತ್ತಾ, ಅವರ ನಿರ್ಧಾರಿತ ಶಿಲ್ಪಕಲಾಭ್ಯಾಸಕ್ಕೆ ಹೆಚ್ಚಿನ ಆಸಕ್ತಿಯಿಂದ ಮಾರ್ಗದರ್ಶನ ಮಾಡುತ್ತಾ, ನಗುತ್ತಲೇ ಎಲ್ಲ ವಿದ್ಯಾರ್ಥಿಗಳ ಮನಗೆದ್ದು ಮುದ ನೀಡುತ್ತಿದ್ದ ಅವರ ವ್ಯಕ್ತಿತ್ವ ನಿಜಕ್ಕೂ ಅನುಕರಣೀಯವಾದದ್ದೇ. ಗುಡಿಯವರು ಹೆಚ್ಚು ಮನಸ್ಸಿಟ್ಟು ಮಾಡುತ್ತಿದ್ದುದು ಲ್ಯಾಂಡ್‌ಸ್ಕೇಪ್ ಪೇಂಟಿಂಗ್ ಎಂದರೆ ಅತಿಶಯೋಕ್ತಿಯೇನಲ್ಲ. ಅವರ ಈ ಕೃತಿಗಳ ರಚನೆಯು ಸರಿಸುಮಾರು ಎಲ್ಲ ವಿದ್ಯಾರ್ಥಿಗಳನ್ನು ಮಂತ್ರಮುಗ್ಧರನ್ನಾಗಿಸುತ್ತಿತ್ತು. ಅಷ್ಟೇ ಏಕೆ ನಾವೂ ಸಹ– ಅಂದರೆ ಉಪನ್ಯಾಸಕರಾದ ನಾವೇ ಅವರ ಕೃತಿಗಳನ್ನು ನೋಡುತ್ತಾ ಮೈಮರೆದ ಉದಾಹರಣೆಗಳೆಷ್ಟೋ. ಅವರ ಕೃತಿಗಳಲ್ಲಿ ಮೂಡಿಬರುತ್ತಿದ್ದ ಬೆಳಕು ನೆರಳಿನಾಟಕ್ಕೆ ಹಲವು ಪ್ರಶಸ್ತಿಗಳೂ ಬಂದಿದ್ದು ಅತಿಶಯವೇನಲ್ಲ. ಪ್ರಾಯಶಃ ಅವರ ಲ್ಯಾಂಡ್‌ಸ್ಕೇಪ್‌ಗಳ ಮೇಲೆ ನಾಡಿನ ಹೆಸರಾಂತ ಕಲಾವಿದರಲ್ಲೊಬ್ಬರಾಗಿದ್ದ ಶ್ರೀಯುತ ಕೆ.ಬಿ. ಕುಲಕರ್ಣಿ (ಬೆಳಗಾಂ)ಯವರ ಮಾರ್ಗದರ್ಶನ ಉಂಟಾಗಿರಬಹುದೆಂದು ಬಹುಜನರ ಅಭಿಪ್ರಾಯ. ಏನೇ ಆದರೂ ಶ್ರೀಯುತ ತ್ರಿಯಂಬಕ, ವಿ. ಗಣೇಶ್‌ಗುಡಿಯವರ ಕಲಾಕೃತಿಗಳು ಅವರತನದೊಂದಿಗೆ ರೂಪಗೊಂಡಿದ್ದಂತೂ ನಿಜ.

ಪ್ರತಿ ವಿಷಯದಲ್ಲೂ ಶಿಸ್ತು ಗುಡಿಯವರ ಗುಣವಿಶೇಷತೆಯಾಗಿತ್ತು. ಯಾವುದೇ ವಿಚಾರವಾದರೂ ಸಹ ತರ್ಕಬದ್ಧವಾಗಿ ಚರ್ಚೆ ಮಾಡುವಲ್ಲಿ ಅವರೆಂದೂ ಹಿಂದೆ ಬಿದ್ದವರಲ್ಲ. ನ್ಯಾಯವಾದ

ಮಾತಿಗೆ ಸದಾ ಬೆಂಬಲಿಸುತ್ತಾ, ಅನ್ಯಾಯವನ್ನು ವಿರೋಧಿಸುತ್ತಾ ಬಂದ ಗುಡಿಯವರು ಎಷ್ಟೋ ಬಾರಿ ಸಹೋದ್ಯೋಗಿಗಳ ನಿಷ್ಠುರ ನುಡಿಗಳಿಗೆ ಕಿವಿ ಕೊಡಬೇಕಾಗುತ್ತಿದ್ದ ಅದಕ್ಕೆ ಗಮನವನ್ನೇ ಕೊಡುತ್ತಿರಲಿಲ್ಲ. ಸಹೋದ್ಯೋಗಿ ಮಿತ್ರರಿಗೆ ಎಲ್ಲವನ್ನೂ ತಿಳಿಸಿಹೇಳಿ ಅವರ ಕೋಪವನ್ನು ಶಮನಗೊಳಿಸುವ ಕಲೆಯೂ ಗುಡಿಯವರಿಗೆ ಕರಗತವಾಗಿತ್ತು.

ಶಿಲ್ಪಕಲಾ ವಿಭಾಗದಲ್ಲಿ ವಿದ್ಯಾರ್ಥಿಗಳಿಗೆ ಮೋಡಿ ಮಾಡುವ ಚಾಣಾಕ್ಷತೆಯು ಶ್ರೀಯುತರಲ್ಲಿತ್ತು ಎಂಬುದಕ್ಕೆ ವಿದ್ಯಾರ್ಥಿಗಳ ಹಾಜರಾತಿಯೇ ಸಾಕ್ಷಿಯಾಗುತ್ತಿತ್ತು. ಸರಳವಾಗಿ ಕಲಾಕೃತಿಗಳನ್ನು ರಚಿಸುವ ಇವರ ಕೈಚಳಕ, ಕೃತಿ ಮಾಡುವ ವಿಧಾನ, ಕರಡು ಕಲಾಕೃತಿಗಳ ರಚನೆ, ಈ ಎಲ್ಲಾ ಅಂಶಗಳು ವಿದ್ಯಾರ್ಥಿಗಳ ಮನಃಪಟಲದ ಮೇಲೆ ಅಚ್ಚೊತ್ತಿ, ಅವರು ವಿದ್ಯಾರ್ಥಿಗಳು ತಮ್ಮದೇ ಕಲ್ಪನೆಯ ಕೃತಿಗಳನ್ನು ರಚಿಸಲು ಪ್ರಚೋದನೆ ನೀಡುತ್ತಿದ್ದುದನ್ನು ನಾನು ಗಮನಿಸಿದ್ದೇನೆ. ಹಾಗೆಯೇ ನಾನು ವಾಣಿಜ್ಯ ಕಲೆಯ ಉಪನ್ಯಾಸಕನಾಗಿದ್ದರೂ ಶಿಲ್ಪಕಲಾ ವಿಭಾಗಕ್ಕೆ ಹೋಗಿ ಸಾಕಷ್ಟು ಬಾರಿ ಕೈಕೆಸರಾಗಿಸಿಕೊಂಡಿದ್ದೂ ಸಹ ಅವರ ಪ್ರಭಾವದಿಂದಲೇ ಎಂದು ಹೇಳಿದರೆ ತಪ್ಪಾಗಲಾರದು. ಅವರ ಪ್ರಯತ್ನದ ಫಲವಾಗಿಯೇ ಲಲಿತಕಲಾ ವಿದ್ಯಾಲಯದಲ್ಲಿ ಶಿಲ್ಪಕಲೆಯ ಅಧ್ಯಯನಕ್ಕಾಗಿ 'ಶಿಲ್ಪಕಲಾ' ವಿಭಾಗವನ್ನು ಪ್ರಾರಂಭಿಸಿದ್ದು ಒಂದು ದೊಡ್ಡ ಸಾಧನೆಯೆಂದೇ ಹೇಳಬಹುದು. 1993ರಲ್ಲಿ ಕುವೆಂಪು ವಿಶ್ವವಿದ್ಯಾನಿಲಯದ ಸ್ಥಾನಿಕ ವಿದ್ಯಾಲಯವಾದ ನಂತರ ಪದವಿ ತರಗತಿಗಳು ಪ್ರಾರಂಭಿಸಿದಂದಿನಿಂದಲೇ ದಾವಣಗೆರೆಯ ಈ ಲಲಿತಕಲಾ ಮಹಾವಿದ್ಯಾಲಯದಲ್ಲಿ ಶಿಲ್ಪಕಲಾ ವಿಭಾಗವು ಪ್ರಾರಂಭವಾಗಲು ಕಾರಣರಾದ ಗುಡಿಯವರು ಎನ್ನುವುದನ್ನು ಯಾರೂ ಮರೆಯಲಾರರು. ಗುಡಿಯವರ ಕ್ರಿಯಾಶೀಲತೆ, ಶಿಸ್ತುಬದ್ಧ ಜೀವನ ಇವೆಲ್ಲಾ ಅವರನ್ನು ಗುರುತಿಸಲು ಸಾಕೆನಿಸುತ್ತೆ. ಹಲವಾರು ಪ್ರಶಸ್ತಿಗಳು, ಹತ್ತಾರು ಏಕವ್ಯಕ್ತಿ ಪ್ರದರ್ಶನಗಳು, ಸಮೂಹ ಪ್ರದರ್ಶನಗಳು, ಪ್ರಾತ್ಯಕ್ಷಿಕೆಗಳು ಹೀಗೆ ಎಷ್ಟೊಂದು ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಗುಡಿಯವರು ದಾವಣಗೆರೆಯ ನಾಗರಿಕರಿಗೆ ಪರಿಚಯವಾದದ್ದು ತಮ್ಮ ಸಿಮೆಂಟ್ ಭಾವಶಿಲ್ಪಗಳು ಹಾಗೂ ನಗರದ 'ಗೀತಾಮಂದಿರ'ದಲ್ಲಿ ರಚಿಸಿರುವ ಕಲಾಕೃತಿಗಳಿಂದಾಗಿಯೇ.

ಸಹೃದಯಿ, ಸ್ನೇಹಮಯಿ ಹಾಗೂ ವಿನೋದಪ್ರಿಯರಾಗಿದ್ದ ಅವರೊಂದಿಗೆ ಆನಂದಿಸಿದ ಹಾಸ್ಯಮಯ ಸಮಯಗಳು, ನಿರಂತರ ಉತ್ಸಾಹ ಹಾಗೂ ಆನಂದವನ್ನು ನೀಡುತ್ತಾ ನಗೆಬುಗ್ಗೆಗಳನ್ನು ಹೊರಹೊಮ್ಮಿಸಿ ಎಲ್ಲ ಕಷ್ಟ-ಅನಿಷ್ಟಗಳನ್ನು ಮರೆತ ಸಮಯವನ್ನು ಎಂದೂ ಮರೆಯಲಾಗದ ಅನುಭವ. ಶ್ರೀ ಟಿ.ವಿ. ಗಣೇಶಗುಡಿಯವರು ಸ್ನೇಹಸಂಬಂಧಕ್ಕೆ ಕೊಡುತ್ತಿದ್ದ ಮರ್ಯಾದೆಯು ಅನುಕರಣೀಯವಾಗಿತ್ತು. ಓರ್ವ ಚಿತ್ರಕಲಾವಿದನಾಗಿ, ಶಿಲ್ಪಿಯಾಗಿ, ಶಿಕ್ಷಕನಾಗಿ, ಉತ್ತಮ ಸ್ನೇಹಿತನಾಗಿ ಬದುಕಿದ 'ಗುಡಿಯವರು' ನಿಜಕ್ಕೂ 'ಗುಡಿ'ಯಾಗಿದ್ದವರು.

ಮಲ್ಲಿಕಾರ್ಜುನ ಜಾಧವ್



ಟಿ.ವಿ. ಗಣೇಶಗುಡಿ

T.V. Ganeshgudi

ಟಿ.ವಿ. ಗಣೇಶಗುಡಿ

ಕರ್ನಾಟಕದ ಕಲಾಕ್ಷೇತ್ರವನ್ನು ಶ್ರೀಮಂತಗೊಳಿಸಿದ ಕಲಾವಿದರಲ್ಲಿ ಶ್ರೀ ಟಿ.ವಿ. ಗಣೇಶಗುಡಿ ಅವರ ಸ್ಥಾನಮಾನ ತುಂಬಾ ಎತ್ತರದಲ್ಲಿದೆ. ಮುಗ್ಧಮನಸ್ಸಿನ, ಸತತ ಕ್ರಿಯಾಶೀಲರಾಗಿದ್ದ ಗಣೇಶಗುಡಿಯವರು, ಕಲಾವಿದರ ಬಳಗದಲ್ಲಿನ ಅತ್ಯಂತ ಪ್ರಿಯ ವ್ಯಕ್ತಿಯಾಗಿದ್ದರು. ಅವರು ರಚಿಸಿದ ಕಲಾಕೃತಿಗಳು, ಶಿಲ್ಪಗಳು, ಭಿತ್ತಿಚಿತ್ರಗಳು, ದೇಶವಿದೇಶಗಳಲ್ಲಿ ಹರಡಿಕೊಂಡಿವೆ. ಪರಿಶ್ರಮ, ನಿಷ್ಠೆ ಮತ್ತು ಕಲೆಯ ಬಗ್ಗೆಯಿದ್ದ ಅವರ ಸಮರ್ಪಣಾಭಾವ ಆಶ್ಚರ್ಯವನ್ನುಂಟು ಮಾಡುತ್ತಿದ್ದವು. ವಿಶ್ರಾಂತಿಗೆ ಅವಕಾಶವಿಲ್ಲದಂತೆ ಕೆಲಸ ಮಾಡುವ ಅವರ ಗುಣ ಅವರ ಪಾಲಿಗೆ ಕೀರ್ತಿಯನ್ನು ತಂದುಕೊಟ್ಟಿತ್ತು.

ಹಾವೇರಿ ಜಿಲ್ಲೆಯಲ್ಲಿನ ಒಂದು ಚಿಕ್ಕ ಊರು ಹಾನಗಲ್ಲು ಇವರ ಹುಟ್ಟೂರು. ಈ ಹಾನಗಲ್ಲಿನಲ್ಲಿ ವಿಶ್ವಕರ್ಮ ಕುಟುಂಬದಲ್ಲಿ ಹುಟ್ಟಿದ್ದರಿಂದ ಕಲೆ ಪಾರಂಪರಿಕವಾಗಿ ಬಂದಿತ್ತು. ಓದುಬರಹ ಊರಿನ ಶಾಲೆಯಲ್ಲಿಯೇ ಪ್ರಾರಂಭವಾಯಿತು. ಶಾಲೆಯಲ್ಲಿ ಒಳ್ಳೆಯ ವಿದ್ಯಾರ್ಥಿಯಾಗಿದ್ದರು. 1963ರಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ಎರಡನೇ ದರ್ಜೆಯಲ್ಲಿ ಪಾಸಾದರು.

ಬಣ್ಣ, ಬೆಳಕು ಮತ್ತು ಅಸಂಖ್ಯ ರೂಪಾಕೃತಿಗಳಿಂದ ತುಂಬಿ ತುಳುಕುತ್ತಿದ್ದ ಈ ಚೈತನ್ಯಯುತ ಸೃಷ್ಟಿಯ ಲಾವಣ್ಯ ಮತ್ತು ಲಾಸ್ಯ, ಸಂವೇದನಾಶೀಲ ಮನಸ್ಸಿಗೆ ಅದ್ಭುತ ಆನಂದವನ್ನು ನೀಡುವಲ್ಲಿ ಸಂದೇಹವಿಲ್ಲ. ಕಲಾವಿದನ ಮನಸ್ಸು ಈ ಸೃಷ್ಟಿಯ ಶೃಂಗಾರದ ಕಡೆಗೆ ಹೊರಳಿದಾಗ ಅವನಲ್ಲಿನ ಕಲೆ ಜಾಗೃತವಾಗುತ್ತದೆ. ಕಲಾವಿದನ ಅನುಭವಕ್ಕೆ ಅಭಿವ್ಯಕ್ತವಾಗುವ ಆಶೆ ಹುಟ್ಟುತ್ತದೆ. ಆಗ ಕಲಾವಿದ ವಿಶ್ವಕರ್ಮನಂತೆ ತನ್ನದೇ ಅನುಭವದ ಪ್ರಪಂಚವನ್ನು ಸಾಕಾರಗೊಳಿಸುವ ಕಾರ್ಯಕ್ಕೆ ತೊಡಗುತ್ತಾನೆ. ಹಾಗೆಯೇ ಶ್ರೀ ಗಣೇಶಗುಡಿ ಅವರ ದಟ್ಟ ಅನುಭವಗಳು ರೂಪುಗೊಳ್ಳಲು ಆರಂಭಿಸಿದವು. ರೇಖೆ ಮತ್ತು ಬಣ್ಣಗಳ ಮಾಧ್ಯಮದಿಂದ ಅವರು ತಮ್ಮ ಪ್ರಪಂಚವನ್ನು ಪ್ರಕಟಗೊಳಿಸಿದರು.

ಯಾವುದೇ ವಿಷಯದಲ್ಲಿ ಪರಿಣತಿ ಬರಬೇಕಾದರೆ ಆ ವಿಷಯದ ಅಧ್ಯಯನ ಆವಶ್ಯಕವಾಗಿರುತ್ತದೆ. ಕೇವಲ ಪ್ರತಿಭೆಯಿಂದ, ಅಂತಃಪ್ರೇರಣೆಯಿಂದ ಎಲ್ಲ ಕರಗತವಾಗುವುದಿಲ್ಲ. ಅದಕ್ಕೆ ಅಧ್ಯಯನ, ಮನಸ್ಸು ಮತ್ತು ಚಿಂತನೆ ಬೇಕು. ಈ ಕಾರಣದಿಂದಲೇ ಶ್ರೀ ಗಣೇಶಗುಡಿಯವರು 'ಆರ್ಟ್ ಮಾಸ್ಟರ್' ಪರೀಕ್ಷೆಯಲ್ಲಿ ರಾಜ್ಯಕ್ಕೇ ಎರಡನೆಯ ಸ್ಥಾನವನ್ನು ಪಡೆದು ತೇರ್ಗಡೆಯಾದರು. ನಗದು ಬಹುಮಾನವನ್ನೂ ಪಡೆದರು. ಇದಾಗಿದ್ದು 1968ರಲ್ಲಿ.

ಕೇವಲ ಚಿತ್ರಕಲೆಯಲ್ಲಷ್ಟೇ ಅಲ್ಲ, ಶಿಲ್ಪಕಲೆಯಲ್ಲಿಯೂ ಇವರಿಗೆ ಆಸಕ್ತಿಯಿತ್ತು. ಅಂತೆಯೇ ಶಿಲ್ಪಕಲೆಯಲ್ಲಿನ ಡಿಪ್ಲೊಮಾ ಪಡೆದುಕೊಂಡರು. ಇದರಲ್ಲಿಯೂ ರಾಜ್ಯಕ್ಕೇ ಎರಡನೆಯ ಸ್ಥಾನ ದೊರಕಿತು, ನಗದು ಬಹುಮಾನವೂ ಬಂತು.

ಕಲೆಯ ವಿಭಿನ್ನ ಶಾಖೆಗಳಲ್ಲಿಯೂ ಇವರಲ್ಲಿ ಆಸಕ್ತಿ ಇತ್ತು. ಲಲಿತಕಲೆಯ ಪೇಂಟಿಂಗ್‌ನಲ್ಲಿ 1969ರಲ್ಲಿ ಡಿಪ್ಲೊಮಾ ಗಳಿಸಿಕೊಂಡರು.

ಕಲೆಯಲ್ಲಿ ನಿರಂತರ ತಮ್ಮನ್ನು ತೊಡಗಿಸಿಕೊಂಡ ಗಣೇಶಗುಡಿಯವರು, ಶಿಲ್ಪಕಲೆಯ ಉಪನ್ಯಾಸಕರಾಗಿದ್ದರೂ ಜೀವನವಿಡೀ ವಿದ್ಯಾರ್ಥಿಗಳೇ ಆಗಿದ್ದರು. ಎಲ್ಲಿ ಯಾವ ಕ್ಷೇತ್ರದಲ್ಲಿ ಜ್ಞಾನ ಸಿಗುತ್ತದೆಯೋ ಅಲ್ಲಿಂದ ಅದನ್ನು ಪಡೆದುಕೊಳ್ಳುವ ಹಂಬಲ ಅವರಲ್ಲಿತ್ತು. ಬಿಚ್ಚುಮನಸ್ಸಿನಿಂದ, ತೆರೆದ ಕಣ್ಣಿನಿಂದ, ಎಲ್ಲ ರೀತಿಯ ಸೌಂದರ್ಯವನ್ನು ಗ್ರಹಿಸುತ್ತಾ ಬಂದರು. ನಿಸರ್ಗ ದೃಶ್ಯಗಳೆಂದರೆ ಅವರಿಗೆ ಬಹಳ ಪ್ರೀತಿ. ನದಿ, ನೀರು, ಸಸ್ಯಸಂಪತ್ತು, ಆಕಾಶ, ಪಶುಪಕ್ಷಿಗಳು, ಭವ್ಯ ಕಟ್ಟಡಗಳು, ಸುಂದರ ದೇವಾಲಯಗಳು – ಇಂಥ ಪರಿಸರದಲ್ಲಿ ಮಾನವಾಕೃತಿಗಳು ಗಣೇಶಗುಡಿ ಅವರಿಗೆ ಆಕರ್ಷವಾದ ಕೇಂದ್ರವಾದವು. ಆ ಕ್ಷಣಕ್ಕೆ ಕಂಡ ದೃಶ್ಯ ಎಲ್ಲಿ ಮರುಕ್ಷಣ ಮಾಯವಾಗಿಬಿಡುತ್ತದೆಂದು ಕಳವಳ. ಆದ್ದರಿಂದ ಬೇಗನೆ ಅವುಗಳನ್ನು ಸೆರೆಹಿಡಿಯುವ ತವಕ ಅವರಲ್ಲಿತ್ತು. ಕ್ಷಣಿಕ ಸೌಂದರ್ಯವನ್ನು ಶಾಶ್ವತಗೊಳಿಸಬೇಕೆಂಬುದೇ ಅವರ ಆಸೆಯಾಗಿತ್ತು. ಹೀಗಾಗಿ ಸಹಸ್ರಾರು ನಿಸರ್ಗ ಚಿತ್ರಗಳನ್ನು ಬಿಡಿಸಿದರು. ಇದರಿಂದ ನಿಸರ್ಗ ಚಿತ್ರ ಬರೆಯುವಲ್ಲಿ ಸಿದ್ಧಹಸ್ತರಾದರು. ಕುಂಚದ ಸ್ವಚ್ಛಂದ ಪ್ರಯೋಗ, ಬಣ್ಣಗಳ ಸಾಂಗತ್ಯ ಮತ್ತು ದೃಶ್ಯದಲ್ಲಿರಬೇಕಾದ ತರಲತೆ ಇವರ ಎಲ್ಲ ಚಿತ್ರಗಳಲ್ಲಿ ಕಾಣಬಹುದು. ರಂಗು ರೇಖೆಗಳ ಯಾತ್ರೆಗೆ ಹೊರಟರು ಈ ತೀರ್ಥಯಾತ್ರಿ ಗಣೇಶಗುಡಿ.

ವ್ಯಕ್ತಿಗೆ ಒಂದು ಸ್ಥಿರವಾದಂತಹ ಉದ್ಯೋಗ ಬೇಕು. ಉಪಜೀವನಕ್ಕೆ ಉದ್ಯೋಗ ಬಹಳ ಅನಿವಾರ್ಯ. ದಾವಣಗೆರೆಯ ಲಲಿತಕಲಾ ಮಹಾವಿದ್ಯಾಲಯದಲ್ಲಿ ಶಿಲ್ಪಕಲಾ ವಿಭಾಗದ ಮುಖ್ಯಸ್ಥರಾದರು. ಲಲಿತಕಲೆ ಮತ್ತು ಶಿಲ್ಪಕಲೆ ಎರಡರಲ್ಲಿಯೂ ಉನ್ನತ ಪದವಿಯನ್ನು ಪಡೆದದ್ದರಿಂದ ಅವರಿಗೆ ಎರಡೂ ಪ್ರಕಾರಗಳಲ್ಲಿ ಆಸಕ್ತಿ ಇತ್ತು. ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಪಾಠಪ್ರವಚನ ಮಾಡುತ್ತಲೇ ತಮ್ಮ ಕಲಾಸೇವೆಯನ್ನು ಮುಂದುವರಿಸಿದರು.

ಕಲಾಪ್ರಪಂಚದಲ್ಲಿ ತರತರದ 'ಇಸಂ'ಗಳು ಬಂದವು, ಹೋದವು. ಎಳೆಯ ಕಲಾವಿದರು ಒಂದಿಲ್ಲೊಂದು 'ಇಸಂ'ಗೆ ಶರಣು ಹೋಗುವುದು ಸ್ವಾಭಾವಿಕ. ಆದರೆ ಗಣೇಶಗುಡಿಯವರು ಇಂಥದೊಂದು 'ಇಸಂ'ಗೆ ಮಾರುಹೋಗಿದ್ದರೆಂದು ಅನ್ನಿಸುವುದಿಲ್ಲ. ಆಧುನಿಕ, ಮಾಡರ್ನ್ ಎಂಬ ಶೈಲಿಯನ್ನು ಅವರು ಸ್ವೀಕರಿಸಲಿಲ್ಲ. ಅವರು ತಮ್ಮದೇ ಶೈಲಿಯಲ್ಲಿ ಚಿತ್ರ ಬರೆದರು, ಶಿಲ್ಪಗಳನ್ನು ರಚಿಸಿದರು. ಒಂದು ರೀತಿಯ ಪಾರಂಪರಿಕ ಶೈಲಿಯನ್ನೇ ಅವರು ಅವಲಂಬಿಸಿದ್ದರು.

1981–82ರಲ್ಲಿ ಮದ್ರಾಸಿಗೆ ಹೋಗಿ 'ಕ್ವಾಲಿಟಿ ಇಂಪ್ರೂವ್‌ಮೆಂಟ್ ಪ್ರೋಗ್ರಾಮ್ ಆನ್ ಮಾಡರ್ನ್ ಎಜುಕೇಶನ್' ಎಂಬ ವಿಷಯದಲ್ಲಿ ತರಬೇತಿಯನ್ನು ಪಡೆದರು.

1983ರಲ್ಲಿ 'ಲಲಿತಕಲಾ ಅಕಾಡೆಮಿಯ ರೀಜನಲ್ ಸೆಂಟರ್' ಆಯೋಜಿಸಿದ್ದ ಸಿರ್‍ಯಾಮಿಕ್ ಶಿಬಿರದಲ್ಲಿ ಭಾಗವಹಿಸಿ, ಕಲಾಕೃತಿಗಳನ್ನು ನಿರ್ಮಿಸಿದರು. ಈ ಕಲಾಕೃತಿಗಳು ಆಧುನಿಕ ಹಾಗೂ ಪಾರಂಪರಿಕ ಶೈಲಿಗಳನ್ನೊಳಗೊಂಡಿವೆ.

ದಕ್ಷಿಣ ಮಧ್ಯ ಸಾಂಸ್ಕೃತಿಕ ಕೇಂದ್ರ ನಾಗಪುರ 1995ರಲ್ಲಿ ಗುಲಬರ್ಗಾದಲ್ಲಿ 'ಮೆಟಲ್ ಕಾಸ್ಟಿಂಗ್ ವರ್ಕ್‌ಶಾಪ್'ನಲ್ಲಿ ಭಾಗವಹಿಸಿ ತಾವು ರಚಿಸಿದ ಕಲಾಕೃತಿಯಿಂದ ಪ್ರಶಂಸೆಗೆ ಪಾತ್ರರಾದರು.

18'x14' ಎತ್ತರದ ದಾವಣಗೆರೆಯ ಗೀತಾಮಂದಿರದ ವಿಶ್ವರೂಪ ದರ್ಶನ ರಿಲೀಫ್ ಶಿಲ್ಪ ಅವರ

ಅದ್ಭುತ ಶಕ್ತಿಗೆ ಸಾಕ್ಷಿಯಾಗಿದೆ. ದಾವಣಗೆರೆಯಲ್ಲಿಯೇ ಅವರು ನಿರ್ಮಿಸಿದ ಜಯಚಾಮರಾಜೇಂದ್ರ ಒಡೆಯರ್‌ರವರ 'ಬಸ್ಟ್' ಅವರ ಕೌಶಲ್ಯಕ್ಕೆ ನಿದರ್ಶನವಾಗಿದೆ. ಇವರ ಶಿಲ್ಪ ಮತ್ತು ಭಿತ್ತಿಚಿತ್ರಗಳು ನಾಡಿನಾದ್ಯಂತ ಹರಡಿಕೊಂಡಿವೆ. ನಟರಾಜ, ಶಕುಂತಲಾ, ಜಯಪ್ರಕಾಶ ನಾರಾಯಣ, ಏಕತಾರಿಯನ್ನು ಹಿಡಿದುಕೊಂಡು ಬರಿ ಮೈಯಿಂದ ಕುಳಿತ ವೃದ್ಧ, ಸುಂದರ ಹೆಣ್ಣು ಮುಖಗಳು, ಶ್ರೀ ಗಣೇಶಗುಡಿಯವರ ಕಲಾಪ್ರತಿಭೆಯನ್ನು ಪರಿಚಯಿಸುವಂತಹ ಕೃತಿಗಳು.

ಮಧ್ಯಪ್ರದೇಶದ ಬಸ್ತಾರ್‌ನಲ್ಲಿ ಸಂಘಟಿಸಲಾದ 'ಟೆರಾಕೋಟಾ' ಶಿಬಿರದಲ್ಲಿ ಭಾಗವಹಿಸಿ ಅಲ್ಲಿ ಬಸ್ತರ್ ಸುಂದರಿಯ ಪ್ರತಿಮೆಯನ್ನು ತಯಾರಿಸಿದರು. ಏಕಲವ್ಯನ ಏಕಾಗ್ರತೆಯಿಂದ ಕೆಲಸ ಮಾಡುತ್ತಿದ್ದ ಗಣೇಶಗುಡಿ ಅವರಿಗೆ ಬಿಡುವಿಲ್ಲದ ಕೆಲಸ. ವಿಶ್ರಾಂತಿಗೂ ಅವಕಾಶವಿರಲಿಲ್ಲ. ಕಲೆಗೆ ಸಂಪೂರ್ಣತೆಯಿಂದ ಸಮರ್ಪಿತರಾದ ಗಣೇಶಗುಡಿ ಅವರಿಗೆ ಪ್ರಶಸ್ತಿ ಪುರಸ್ಕಾರಗಳು ಬಂದಿದ್ದು ಹಲವಾರು. ಕೆಲವನ್ನು ಮಾತ್ರ ಇಲ್ಲಿ ಉಲ್ಲೇಖಿಸಬಹುದಾಗಿದೆ.

1. ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ - 1985
2. ಮೈಸೂರು ದಸರಾ ಕಲಾ ಪ್ರದರ್ಶನ ಮೊದಲ ಬಹುಮಾನ - 1975, 1977, 1979 ಮತ್ತು 1983
3. ಅಖಿಲ ಭಾರತ 50ನೇ ಕನ್ನಡ ಸಾಹಿತ್ಯ ಸಮ್ಮೇಳನ, ನವದಿಲ್ಲಿ - ಎರಡನೇ ಬಹುಮಾನ, 1978
4. ಅಖಿಲ ಭಾರತ ಲಲಿತಕಲಾ ಪ್ರದರ್ಶನ (ಗದಗ) 1991
5. ಲಯನ್ಸ್ ಕ್ಲಬ್, ದಾವಣಗೆರೆಯಿಂದ ಗೌರವ ಪ್ರಶಸ್ತಿ 1988
6. ಲಯನ್ಸ್ ಕ್ಲಬ್, ಧಾರವಾಡ - 1976ರ ಕಲಾ ಪ್ರದರ್ಶನ, ಎರಡನೇ ಬಹುಮಾನ

ಅಷ್ಟೊಂದು ಪ್ರಚಾರಪ್ರಿಯರಲ್ಲದ ವ್ಯಕ್ತಿ ಗಣೇಶಗುಡಿ. ಅವರ ಚಿತ್ರ ಮತ್ತು ಶಿಲ್ಪಗಳ ಏಕವ್ಯಕ್ತಿ ಪ್ರದರ್ಶನಗಳು ನಾಡಿನಾದ್ಯಂತ ಏರ್ಪಡಿಸಲಾಗಿದ್ದವು.

ದಾವಣಗೆರೆಗೆ ಬಂದರೆ ಎಲ್ಲೆಲ್ಲಿಯೂ ಗಣೇಶಗುಡಿಯವರ ಶಿಲ್ಪಗಳು ದೃಷ್ಟಿಗೋಚರವಾಗುತ್ತವೆ. ದಾವಣಗೆರೆಯ ನಗರಸಭೆಯ ಆವರಣದಲ್ಲಿ ಭಾರತ ರತ್ನ ಅಂಬೇಡ್ಕರ್‌ರವರ 'ಬಸ್ಟ್' ತುಂಬ ಸುಂದರವಾಗಿದೆ. ದಾವಣಗೆರೆಯಲ್ಲಿ ಸುಳಿದಾಡಿದರೆ ಸಾಕು, ಒಂದಿಲ್ಲೊಂದು ಪ್ರತಿಮೆ ಕಾಣಿಸಲೇಬೇಕು. ಇದು ಯಾರದೆಂದು ಕೇಳಿದರೆ ಚಿಕ್ಕ ಮಕ್ಕಳೂ ಇದು ಗಣೇಶಗುಡಿ ಸರ್ ಅವರು ಮಾಡಿದ್ದು ಎಂದು ಹೇಳುವುದು ಸಹಜ. ಒಬ್ಬ ಕಲಾವಿದ ತನ್ನ ಕಲೆಯ ಮುಖಾಂತರ ಒಂದು ರೀತಿಯ ಕಲಾತ್ಮಕ ಪರಿಸರವನ್ನು ನಿರ್ಮಿಸಿದ್ದು ಕಂಡರೆ, ನೋಡುವವರಿಗೆ ಸಂತೋಷವಾಗದೇ ಇರದು. ಇದರ ಶ್ರೇಯ ಮತ್ತು ಕೀರ್ತಿ ಗಣೇಶಗುಡಿಯವರಿಗೇ ಸಲ್ಲುತ್ತದೆ.

ಗಣೇಶಗುಡಿಯವರು ಎಲ್ಲ ಮಹತ್ವದ ಕಲಾ ಶಿಬಿರಗಳಲ್ಲಿ ಭಾಗವಹಿಸುತ್ತಿದ್ದರು. ಕಲಾಶಿಬಿರಗಳಿಂದ ವಿವಿಧ ಭಾಗಗಳ ಕಲಾವಿದರ ಕಲಾಕೃತಿಗಳನ್ನು ನೋಡುವ ಅವಕಾಶ ಸಿಗುತ್ತದೆಂದು ನಂಬಿದ್ದರು. ದೇಶದ ಬೇರೆ ಬೇರೆ ಕಡೆಗಳಿಂದ ಬಂದ ಕಲಾವಿದರೊಂದಿಗೆ ತಮ್ಮ ಅನುಭವವನ್ನು ಹಂಚಿಕೊಳ್ಳುತ್ತಿದ್ದರು. ಇತರ

ಕಲಾವಿದರಿಂದ ಪಡೆದ ಮಾಹಿತಿಯಿಂದ ತಮ್ಮ ಅನುಭವ ಕ್ಷೇತ್ರವನ್ನು ವಿಸ್ತರಿಸಿಕೊಳ್ಳುತ್ತಿದ್ದರು. ಗಣೇಶಗುಡಿ ಅವರು ಭಾಗವಹಿಸಿದ ಕೆಲವು ಕಲಾಶಿಬಿರಗಳ ವಿವರಣೆ ಈ ಕೆಳಗಿನಂತಿದೆ.

1. ಜಗದಾಳಪುರದಲ್ಲಿ (ಮಧ್ಯಪ್ರದೇಶ) ಬುಡಕಟ್ಟು ಜನಾಂಗಕ್ಕೆ ಸಂಬಂಧಿಸಿದ ಅವರ ಕಲೆಯನ್ನು ಅಭ್ಯಸಿಸುವ ಶಿಬಿರ
2. ಲಲಿತಕಲಾ ಅಕಾಡೆಮಿ ರೀಜನಲ್ ಸೆಂಟರ್, ಮದರಾಸಿನಲ್ಲಿ ಸಂಘಟಿಸಿದ ಸಿರ್‍ಯಾಮಿಕ್ ಶಿಬಿರ
3. ಕರ್ನಾಟಕ ಲಲಿತಕಲಾ ಅಕಾಡೆಮಿಯ ಬೆಳ್ಳಿ ಹಬ್ಬದ ಸಂದರ್ಭದಲ್ಲಿ ತೈಲ ಚಿತ್ರ ರಚನೆ
4. ಬೆಂಗಳೂರಿನಲ್ಲಿಯ ಶಿಲ್ಪಕಲಾ ಶಿಬಿರ
5. 1985 ಶ್ರೀ ಕೋಲನ್‌ಕೇಲಂ ಇವರ ಮಾರ್ಗದರ್ಶನದಲ್ಲಿ ಬ್ರಿಟಿಷ್ ಕೌನ್ಸಿಲರ್, ಮದರಾಸ್ ಇವರಿಂದ ಸಂಘಟಿಸಲಾದ ಶಿಬಿರ

ರಾಮನಗರ, ಮಡಿಕೇರಿ, ಚಿತ್ರದುರ್ಗ, ಪುಣೆ, ತಂಜಾವೂರ್, ಈ ರೀತಿ ಪತ್ತು ಹಲವಾರು ಶಿಬಿರಗಳಲ್ಲಿ ಭಾಗವಹಿಸಿದ್ದರು. ಅವರ ಕೈಗೆ ಬಂದ ಯಾವ ಅವಕಾಶವೂ ತಪ್ಪಿಸಿಕೊಳ್ಳುತ್ತಿರಲಿಲ್ಲ. ಕಲಾತಪಸ್ವಿಯಂತೆ ಸದಾಕಾಲ ಕಲೆಯ ಗುಂಗನ್ನೇ ಹೊತ್ತುಕೊಂಡು ತಿರುಗುವ ಈ ಕಲಾವಿದರು ತಮ್ಮ ಖಾಸಗೀ ಜೀವನಕ್ಕೆ ಬಿಡುವು ಮಾಡಿಕೊಳ್ಳುತ್ತಿರುವುದು ಹೇಗೆಂಬುದೇ ತಿಳಿಯದು.

ಇವರ ಜಲವರ್ಣ ಚಿತ್ರಗಳ ಸಂಖ್ಯೆ ಎಷ್ಟೆಂದು ಆವರ ಮನೆಯವರಿಗೇ ತಿಳಿಯದಂತಾಗಿರಬೇಕು. ಮನೆಯ ಯಾವ ಭಾಗದಲ್ಲಿಯೂ ಕೈಹಾಕಿದರೆ ಸಾಕು ಇಲ್ಲಿ ಗಣೇಶಗುಡಿಯವರ ಚಿತ್ರ ಇರಲೇಬೇಕು. ಇಷ್ಟು ಚಿತ್ರ, ಛಾಯಾಚಿತ್ರ ಮತ್ತು ಶಿಲ್ಪಗಳಿವೆ ಎಂದು ಹೇಳುತ್ತಲೇ 'ಇನ್ನಷ್ಟು ಕಲಾಕೃತಿಗಳಿವೆ' ಎಂದು ಹೇಳುತ್ತಾರೆ ಅವರ ಶ್ರೀಮತಿಯವರು. ಉಸಿರಾಡುವುದಷ್ಟೇ ಸಹಜ ಚಿತ್ರ ಬರೆಯುವುದೆಂದು ಗಣೇಶಗುಡಿ ಅವರು ನಂಬಿದ್ದಿರಬಹುದು.

ರಾಷ್ಟ್ರೀಯ ಮತ್ತು ರಾಜ್ಯ ಕಲಾ ಪ್ರದರ್ಶನದಲ್ಲಿ ಭಾಗವಹಿಸಿದ ವಿವರಗಳು ಆಶ್ಚರ್ಯವನ್ನುಂಟುಮಾಡುತ್ತದೆ.

1. ಕರ್ನಾಟಕ ಚಿತ್ರ ಕಲಾವಿದರ ಸಮ್ಮೇಳನ - 1968, 1984
2. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ - 1974
3. ಮೈಸೂರು ದಸರಾ ವಸ್ತುಪ್ರದರ್ಶನ - 1970
4. ಕರ್ನಾಟಕ ಲಲಿತಕಲಾ ಅಕಾಡೆಮಿ - 1976
5. ಶಿಲ್ಪಕಲಾ ಪ್ರದರ್ಶನ - 1976
6. ಕರ್ನಾಟಕ ಜಾನಪದ ಕಲಾಪ್ರದರ್ಶನ - 1982
7. ಅಖಿಲ ಭಾರತ ವೀರಶೈವ ಮಹಾಸಭಾ, ಬೆಂಗಳೂರು - 1973
8. ಮುಂಬಯಿ ಆರ್ಟ್ ಸೊಸೈಟಿ - 1984

9. ಮಿನಿಯೇಚರ್ ಶಿಬಿರ, ಗುಲಬರ್ಗಾ - 1992
10. ಪ್ರಾಚ್ಯ ಮತ್ತು ವಾಸ್ತುಶಿಲ್ಪ ಸಂಗ್ರಹಾಲಯ - 1976, 77
11. ಅಖಿಲ ಭಾರತ ವಿಶ್ವಕರ್ಮ ಮಹಾಸಭಾ, ಕಲ್ಕತ್ತಾ - 1973
12. ಧರ್ಮಸ್ಥಳ - 1990
13. ಹಂಪಿ ವಿಶ್ವವಿದ್ಯಾಲಯ - 1992
14. ಕಲಾ ಮಹೋತ್ಸವ, ಬೆಂಗಳೂರು - 1984, 1990

ಧಾರವಾಡ, ದಾವಣಗೆರೆಯಿಂದ ಕಲಕತ್ತಾ, ಮುಂಬಯಿ, ಮಧ್ಯಪ್ರದೇಶ, ಉತ್ತರಪ್ರದೇಶ, ತಮಿಳುನಾಡು ಒಂದೋ ಎರಡೋ ಇವರ ಕಲಾಯಾತ್ರೆ ದೇಶದಾದ್ಯಂತ ನಡೆದುಹೋಗಿದೆ.

ಗಣೇಶಗುಡಿ ಅವರ ಕಲಾಕೃತಿಗಳು, ಶಿಲ್ಪಗಳು, ಅನೇಕ ಸಂಗ್ರಹಾಲಯಗಳಲ್ಲಿ ಕಾಣಬಹುದಾಗಿದೆ. ಖಾಸಗಿಯವರ ಸಂಗ್ರಹದಲ್ಲಿಯೂ ಇವರ ಕಲಾಕೃತಿಗಳಿವೆ. ಪಟ್ಟಿ ಮಾಡುತ್ತಾ ಹೋದರೆ ಅದೊಂದು ಸುದೀರ್ಘ ಪಟ್ಟಿಯಾಗಬಹುದು. ಮುಖ್ಯವಾದ ಕೆಲವು ಸ್ಥಳಗಳನ್ನು ಮಾತ್ರ ಇಲ್ಲಿ ಉಲ್ಲೇಖಿಸಲಾಗಿದೆ.

1. ನ್ಯಾಷನಲ್ ಅಕಾಡೆಮಿ ಆಫ್ ಆರ್ಟ್, ರೀಜನಲ್ ಸೆಂಟರ್, ಮದರಾಸ್ (ಚೆನ್ನೈ)
2. ದಕ್ಷಿಣ ಮಧ್ಯವಲಯ ಸಾಂಸ್ಕೃತಿಕ ಕೇಂದ್ರ, ನಾಗಪುರ
3. ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು
4. ಕರ್ನಾಟಕ ಸರಕಾರದ ಪ್ರಾಚ್ಯ ಮತ್ತು ವಾಸ್ತುಶಿಲ್ಪ ಸಂಗ್ರಹಾಲಯ
5. ಗೀತಾ ಮಂದಿರ, ದಾವಣಗೆರೆ
6. ಕರ್ನಾಟಕ ಚಿತ್ರಕಲಾ ಪರಿಷತ್, ಬೆಂಗಳೂರು
7. ಕರ್ನಾಟಕ ಮೆಡಿಕಲ್ ಕಾಲೇಜು, ಹುಬ್ಬಳ್ಳಿ
8. ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು
9. ವಿಜಯ ಕಲಾಮಂದಿರ, ಗದಗ
10. ಕನ್ನಡ ವಿಶ್ವವಿದ್ಯಾಲಯ, ಹಂಪಿ
11. ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು
12. ಉತ್ತರ ಮಧ್ಯ ಸಾಂಸ್ಕೃತಿಕ ಕೇಂದ್ರ, ಅಲಹಾಬಾದ್
13. ಲಿಂಡ್ಸ್‌ಬರ್ಗ್, ಅಮೇರಿಕಾ, ಇಸ್ರೇಲ್, ನಾರ್ವೆ, ಇಟಲಿ

ಕಲೆಯ ವಿವಿಧ ಮಾಧ್ಯಮಗಳಲ್ಲಿ ಇವರಲ್ಲಿದ್ದ ನಿಪುಣತೆ ಪ್ರಶಂಸನೀಯವೆಂದೇ ಹೇಳಬಹುದು. ಈ ತರದ ಆಸಕ್ತಿಯ ವೈವಿಧ್ಯತೆಯಿಂದಲೇ ಬಿಡುವಿಲ್ಲದ ಕೆಲಸ ಮಾಡುವುದು ಅನಿವಾರ್ಯವಾಗಿತ್ತು.

ಅವರ ಮಿತ್ರವರ್ಗವೂ ಬಹಳ ದೊಡ್ಡದಾಗಿತ್ತು. ಮಿತ್ರರೊಂದಿಗೆ ಮಾತಾಡುವುದು, ಕಲೆಯ ಬಗ್ಗೆ ಚರ್ಚಿಸುವುದು, ಅಷ್ಟೇ ಅಲ್ಲ ತಮ್ಮ ಹೆಂಡತಿ ಮಕ್ಕಳೊಂದಿಗೂ ಚರ್ಚಿಸುವುದು ಅವರಿಗೆ ಬಹಳ ಪ್ರಿಯವಾಗಿತ್ತು.

ಅವರ ಶ್ರೀಮತಿ ವಿಜಯಾ ಅವರಿಗೂ ಕಲೆಯಲ್ಲಿ ಬಹಳ ಆಸಕ್ತಿ. ಪತಿಯ ಅವಿಶ್ರಾಂತ ಕೆಲಸದಲ್ಲಿ ಅವರು ನೆರವಾಗುತ್ತಾ ಬಂದರು. ಮಗಳು ಶಿಲ್ಪಾ ತಂದೆಯ ಆಸಕ್ತಿಯನ್ನು ಮೈಗೂಡಿಸಿಕೊಂಡಳು. ಗಣೇಶಗುಡಿ ಅವರು ನಿರ್ಮಿಸಿದ ಕಲಾಕೃತಿಗಳನ್ನು ಸುರಕ್ಷಿತವಾಗಿಡುವ ಜವಾಬ್ದಾರಿ ಅವರದಾಗಿತ್ತು. ಹೀಗಾಗಿ ದಾವಣಗೆರೆಯ ಅವರ ಮನೆ ಕಲಾಶ್ರೀಮಂತಿಕೆಯಿಂದ ನಳನಳಿಸುತ್ತದೆ.

ಗಣೇಶಗುಡಿ ಅವರು ಸೃಷ್ಟಿ ಸೌಂದರ್ಯಕ್ಕೆ ಮಾರುಹೋದವರು. ಕಲ್ಲು ಬಂಡೆಗಳು, ಚಿಕ್ಕ ಹಳ್ಳ, ಎತ್ತರದ ಪರ್ವತಶಿಖರಗಳು, ಹರಡಿಕೊಂಡ ಹಸಿರು, ತರತರದ ಗಿಡಮರ, ಬಳ್ಳಿಗಳು, ಹೂಕಾಯಿ ಹಣ್ಣುಗಳು ಎಲ್ಲವೂ ಅವರಲ್ಲಿದ್ದ ಕಲಾವಿದನನ್ನು ಪ್ರೇರೇಪಿಸುವ ವಸ್ತುಗಳೇ. ಗಲ್ಲಿಗಳಲ್ಲಿ ಸುತ್ತಾಡುವ ಕೋಳಿ, ಕುರಿಗಳೂ ಇವರ ಚಿತ್ರಗಳಲ್ಲಿ ಕುಣಿದಾಡುತ್ತವೆ. ತೆಳುವಾದ ಜಲವರ್ಣಗಳ ಬಳಕೆಯಲ್ಲಿ ಇವರು ಪಳಗಿದವರಾಗಿದ್ದರು. ವಸ್ತು ಸುಂದರ ಕಂಡರೆ ಸಾಕು. ಹತ್ತಿಪ್ಪತ್ತು ನಿಮಿಷಗಳಲ್ಲಿಯೇ ಅವನ್ನು ಚಿತ್ರಿಸಿಬಿಡುತ್ತಿದ್ದರು. ಇಂಥ ಸಾವಿರಾರು ಚಿತ್ರಗಳು ಇವರ ಸಂಗ್ರಹದಲ್ಲಿವೆ.

ಪ್ರಾಚೀನ ದೇವಾಲಯಗಳು, ಗುಡಿಗುಂಡಾರಗಳು ನಮ್ಮ ದೇಶದ ತುಂಬೆಲ್ಲಾ ಹರಡಿಕೊಂಡಿವೆ. ಅವು ಆಯಾ ಕಾಲದ ಸಾಂಸ್ಕೃತಿಕ ಮತ್ತು ಧಾರ್ಮಿಕ ಒಲವುಗಳನ್ನು ಬಿಂಬಿಸುವ ವಸ್ತುಗಳಾಗಿವೆ. ಗಣೇಶಗುಡಿ ಅವರು ನಮ್ಮ ಕರ್ನಾಟಕದ ಬಹುತೇಕ ದೇವಾಲಯಗಳನ್ನು, ಪ್ರಾಚೀನ ವಸ್ತುಗಳನ್ನು ತಮ್ಮ ಕುಂಚದಿಂದ ಹಿಡಿದಿಟ್ಟಿದ್ದಾರೆ. ಇದೊಂದು ಐತಿಹಾಸಿಕ ಮಹತ್ವದ ಕೆಲಸವೆಂದೇ ನಂಬಬಹುದಾಗಿದೆ. ಅನೇಕ ವಾಸ್ತು ಕಾಲದ ಹೊಡೆತಕ್ಕೆ ಸಿಕ್ಕಿ ಶಿಥಿಲಗೊಂಡಿವೆ. ಇಂಥ ಕಟ್ಟಡಗಳನ್ನು, ದೇವಾಲಯಗಳನ್ನು, ವೀರಗಲ್ಲುಗಳನ್ನು ಚಿತ್ರಿಸಿದ್ದಾರೆ. ಬಹುಶಃ ಆಂತರಿಕವಾಗಿ ಇದು ತಮ್ಮ ಸಾಂಸ್ಕೃತಿಕ ಜವಾಬ್ದಾರಿ ಎಂದೇ ಅರ್ಥ ಮಾಡಿಕೊಂಡಿರಬೇಕು. ಈ ದೃಷ್ಟಿಯಿಂದ ಇವರೊಬ್ಬರು ಅಪರೂಪದ ಕಲಾವಿದರೆಂದೇ ಹೇಳಬೇಕು.

ಗಣೇಶಗುಡಿ ಅವರ ಜಲವರ್ಣದ ಚಿತ್ರಗಳು ತುಂಬ ಸಹಜವಾಗಿವೆ. ನೆರಳು ಬೆಳಕಿನ ಪ್ರಭಾವದಿಂದ ಚಿತ್ರಗಳಲ್ಲಿ ಜೀವಂತಿಕೆಯ ಲಕ್ಷಣಗಳು ಎದ್ದು ಕಾಣುತ್ತವೆ. ಗ್ರಾಮೀಣ ಪ್ರದೇಶಗಳಲ್ಲಿನ ದೃಶ್ಯಗಳು ತಮ್ಮ ಕಥೆಯನ್ನೇ ಹೇಳುತ್ತಿರುವಂತಿವೆ. ಕೆಲವು ಚಿತ್ರಗಳಲ್ಲಿ ಕೇವಲ ಗುಡಿಸಲುಗಳು, ಮಾನವಾಕೃತಿಗಳು ಇಲ್ಲವೇ ಇಲ್ಲ. ಸ್ತಬ್ಧ, ಮೌನ ಆವರಿಸಿದಂತೆ, ಆಕಾಶವೂ ಅಷ್ಟೇ - ಆ ಏಕಾಕಿತನದ ಅವಸ್ಥೆಗೆ ಸ್ಪಂದಿಸುವಂತೆ, ಅದು ಶಾಂತ ಮೌನವಾದಂತೆ ಕಾಣಿಸುತ್ತದೆ - ಮನುಷ್ಯಾಕೃತಿಗಳು ಯಾಕಿಲ್ಲವೆಂಬ ಪ್ರಶ್ನೆ ನೋಡುಗರ ಮನಸ್ಸಿನಲ್ಲಿ ಮೂಡುತ್ತದೆ. ದೇವಾಲಯಗಳ ಚಿತ್ರಗಳಲ್ಲಿಯೂ ಗದ್ದಲ ಕಾಣಿಸುವುದಿಲ್ಲ. ಎಲ್ಲ ದೃಶ್ಯಗಳು ಧ್ಯಾನದಲ್ಲಿ ಮುಳುಗಿದಂತೆ ಭಾಸವಾಗುತ್ತವೆ. ಬಹುಶಃ ಇವು ಕಲಾವಿದರ ಅಂತರಂಗದಲ್ಲಿದ್ದ ಮೌನವನ್ನೇ ಸೂಚಿಸುವಂತಿವೆ.

ಬೆಳಕು, ಮೋಡ, ಮಂಜು ಒಂದರಲ್ಲೊಂದು ಸೇರಿಕೊಂಡು ರಹಸ್ಯಾತ್ಮಕ ವಾತಾವರಣವನ್ನು ಕಲ್ಪಿಸುವ ಚಿತ್ರಗಳು, ಬೇರೊಂದು ರೀತಿಯ ಅನುಭವವನ್ನು ನೀಡುತ್ತವೆ. ಆಶ್ಚರ್ಯವೆಂದರೆ ಅವರ ಯಾವ ಚಿತ್ರುಲ್ಲಿಯೂ ಆಕ್ರೋಶ ಕಂಡುಬರುವುದಿಲ್ಲ. ಬಣ್ಣಗಳ ಅರಾಜಕ ಹರವು ಕಾಣಿಸುವುದಿಲ್ಲ. ತೀವ್ರತೆಯು ಭಾಸವಾಗುವುದಿಲ್ಲ. ಅಮೂರ್ತದ ಕಡೆಗೆ ಗಣೇಶಗುಡಿಯವರು ಅಷ್ಟೇನೂ ಗಮನಹರಿಸಿಲ್ಲವೆಂದೆನಿಸುತ್ತದೆ. ಅಮೂರ್ತ ಒಂದು concept. ಪರಿಕಲ್ಪನೆಯೇ ಹೊರತು ಕ್ರಿಯೆ (Action) ಅಲ್ಲ. ಕ್ರಿಯೆಗೆ ತೊಡಗಿದ್ದಾಗ ಒಂದಿಲ್ಲೊಂದು ರೂಪ ಮೂಡಲೇಬೇಕಲ್ಲ. ಅದೊಂದು ಮೂರ್ತರೂಪವೇ ಸರಿ. ಆದರೆ ಅದನ್ನು ನೋಡಿದವರ ಮನಸ್ಸಿನಲ್ಲಿ

ಹುಟ್ಟಿರುವ ದೃಶ್ಯ, ಕಲ್ಪನೆ, ಅದು ಅಮೂರ್ತವಾಗಿರ ಬಹುದು. ಒಟ್ಟಾರೆ ಕಲಾಕೃತಿ ಪ್ರೇಕ್ಷಕನ ಮನಸ್ಸಿನಲ್ಲಿ ಆನಂದವನ್ನುಂಟುಮಾಡಿದರೆ ಸಾಕಲ್ಲವೆ? ಈ ಕಲ್ಪನೆಯಿಂದಲೇ ಗಣೇಶಗುಡಿ ಅವರು ಕೆಲಸ ಮಾಡಿರಬಹುದೆಂದು ಅನ್ನಿಸುತ್ತದೆ. ಇನ್ನೊಂದು ವಿಚಿತ್ರ ಸಂಗತಿಯೆಂದರೆ ಇವರ ಬಹುತೇಕ ಚಿತ್ರಗಳು ಪಶುಪಕ್ಷಿಗಳೂ ವಿರಳವಾಗಿವೆ. ತಾವು ಚಿತ್ರಿಸಬೇಕೆಂಬ ವಸ್ತುವಿನ ಮೇಲೆ ಮಾತ್ರ ಅವರ ಲಕ್ಷ್ಯ ಕೇಂದ್ರಿತವಾಗುತ್ತದೆ. ಇಲ್ಲಿ ಪರಿಸರ ಗೌಣವಾಗಿಬಿಡುತ್ತದೆ. ಇದರಿಂದ ಚಿತ್ರಗಳು ವಾತಾವರಣದಲ್ಲಿ ಏಕಾಕಿಯಾಗಿ ನಿಲ್ಲುತ್ತವೆ. ಈ ತರಹ ಏಕಾಂತತೆ ಬಹುಶಃ ಇವರ ಸ್ವಭಾವವಾಗಿರಬಹುದು. ತಮ್ಮ ಸ್ವಭಾವದಿಂದಲೇ ಇರಬೇಕು, ಇವರ ಚಿತ್ರಗಳು ತಟಸ್ಥವಾಗಿಬಿಡುತ್ತವೆ. ಇದೊಂದು ಅವರ ಗುಣವೂ ಹೌದು, ದೋಷವೂ ಹೌದು. ರಂಗಸಂಗತಿಯಲ್ಲಿಯೂ ಒಂದೇ ರೀತಿಯ ವರ್ಣ ಛಾಯೆ ಕಂಡುಬರುತ್ತದೆ. ಒದ್ದೆ ಮಾಡಿದ ಕಾಗದದ ಮೇಲೆ ಜಲವರ್ಣಗಳನ್ನು ಹರಿಸುವ ರೀತಿ ವಿಶಿಷ್ಟವಾಗಿದೆ. ಒಂದು ಬಣ್ಣದಲ್ಲಿ ಮತ್ತೊಂದು ಬಣ್ಣ ಸೇರಿ, ಇನ್ನೊಂದು ಛಾಯೆ ಹುಟ್ಟಿಕೊಳ್ಳುವುದರಿಂದ ಚಿತ್ರಗಳಲ್ಲಿ ತರಲತೆ, ಪ್ರವಹನಶೀಲತೆ ಸೃಷ್ಟಿಗೋಚರವಾಗುತ್ತದೆ. ಆದರೆ ರಂಗು ಮತ್ತು ರೇಖೆಗಳ ಮೇಲಿದ್ದ ಇವರ ಹಿಡಿತ ಮೆಚ್ಚುವಂತಹದ್ದಾಗಿದೆ. ಅವರ ಚಿತ್ರದಲ್ಲಿ ಎಲ್ಲಿಯೂ ಬಿಳಿಯ ಬಣ್ಣ ಉಪಯೋಗಿಸದೆ ಕಾಗದವನ್ನೇ ಬಿಳಿಯಾಗಿ ಬಿಡುತ್ತಿದ್ದದ್ದು ಅವರ ವೈಶಿಷ್ಟ್ಯ.

ಪ್ರಾಚ್ಯ ವಸ್ತುಗಳ, ಐತಿಹಾಸಿಕ ಕಟ್ಟಡಗಳ ಇವರು ಬರೆದ ಅಸಂಖ್ಯ ಚಿತ್ರಗಳು ಕರ್ನಾಟಕದ ಶಿಲ್ಪ ಮತ್ತು ಕಲೆಯ ಘನತೆಯನ್ನು ಸಾರಿಹೇಳುತ್ತವೆ. ಗಣೇಶಗುಡಿಯವರು ಸಮೂಹ ಚಿತ್ರಕಲಾ ಪ್ರದರ್ಶನಗಳಲ್ಲಿಯೂ ಭಾಗವಹಿಸುತ್ತಿದ್ದರು. ಕರ್ನಾಟಕ ರಾಜ್ಯದ ಬಹುತೇಕ ಎಲ್ಲ ಮುಖ್ಯ ನಗರಗಳಲ್ಲಿ ಇವರ ಚಿತ್ರ ಹಾಗೂ ಶಿಲ್ಪಗಳು ಪ್ರದರ್ಶನಗೊಂಡಿವೆ.

ಉಪನ್ಯಾಸಕರಾಗಿ ಯಶಸ್ವಿಯಾದ ಗಣೇಶಗುಡಿಯವರು ಹಲವಾರು ಕಡೆಗೆ ಪ್ರಾತ್ಯಕ್ಷಿಕೆಗಳನ್ನು ಮಾಡಿದ್ದಾರೆ. ಹಲವಾರು ಕಡೆ ಉಪನ್ಯಾಸಗಳನ್ನು ನೀಡಿದ್ದಾರೆ. ವಿದ್ಯಾರ್ಥಿಗಳಿಗೆ ಮತ್ತು ಕಲಾಸಕ್ತರಿಗೆ ಮಾರ್ಗದರ್ಶನ ಮಾಡಿದ್ದಾರೆ.

ದಾವಣಗೆರೆಯಲ್ಲಿ 'ಕಲಾಪರಿಚಯ, ಹೊಸ ರಾಷ್ಟ್ರೀಯ ಶಿಕ್ಷಣ ನೀತಿ' ಈ ವಿಷಯದ ಮೇಲೆ ಉಪನ್ಯಾಸ ನೀಡಿದ್ದಾರೆ. ಎ.ಎಂ. ಶಿಕ್ಷಣ ಮಹಾವಿದ್ಯಾಲಯ ಮತ್ತು ಬಾಪೂಜಿ ಶಿಕ್ಷಣ ಮಹಾವಿದ್ಯಾಲಯ, ದಾವಣಗೆರೆಯಲ್ಲಿ ಉಪನ್ಯಾಸಗಳನ್ನು ನೀಡಿದ್ದಾರೆ.

ಗದುಗಿನ ವಿಜಯ ಕಲಾಮಂದಿರದಲ್ಲಿ ಅವರ ಭಾಷಣವನ್ನು ಏರ್ಪಡಿಸಲಾಗಿತ್ತು. ವಿಜಯ ಕಲಾಮಂದಿರ ಮತ್ತು ಗುರುಗಳಾದ ಟಿ.ಪಿ. ಅಕ್ಕಿ ಅವರ ಬಗ್ಗೆ ಅಪಾರ ಅಭಿಮಾನವಿತ್ತು. ಹಂಪೆ, ಬಾದಾಮಿ, ಪಟ್ಟದಕಲ್ಲು, ಐಹೊಳೆ, ಬೇಲೂರು, ಹಳೇಬೀಡು, ಕುದುರೆಮುಖ, ಶ್ರವಣಬೆಳಗೊಳ, ಹೊರನಾಡು, ಮೈಸೂರು, ಶ್ರೀರಂಗಪಟ್ಟಣ, ಸೋಮನಾಥಪುರ, ಕೆ.ಆರ್.ಎಸ್., ಗಂಜಾಂ ಮತ್ತು ಧರ್ಮಸ್ಥಳಗಳಲ್ಲಿ ವಿದ್ಯಾರ್ಥಿಗಳಿಗೆ ಕಲಾಶಿಬಿರಗಳನ್ನು ಸಂಘಟಿಸಿದ್ದಾರೆ.

1992ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ಗುಲಬರ್ಗಾದಲ್ಲಿ ಒಂದು ವಿಚಾರಸಂಕಿರಣ ಏರ್ಪಡಿಸಲಾಗಿತ್ತು. ಅದರಲ್ಲಿ ಇವರು ಭಾಗವಹಿಸಿ ತಮ್ಮ ವಿದ್ವತ್‌ಪೂರ್ಣ ಪ್ರಾತ್ಯಕ್ಷಿಕೆಯಿಂದ ಎಲ್ಲರ ಮೆಚ್ಚುಗೆಯನ್ನು ಗಳಿಸಿದ್ದರು.

ದಾವಣಗೆರೆ ನಗರಸಭೆಗಾಗಿ ನಿರ್ಮಿಸಿದ್ದ ಸ್ತಬ್ಧಚಿತ್ರ 'ಅಮರಶಿಲ್ಪಿ ಜಕಣಾಚಾರಿ' ಕನ್ನಡ ರಾಜ್ಯೋತ್ಸವದಲ್ಲಿ ಎರಡನೇ ಬಹುಮಾನ ಪಡೆದಿತ್ತು.

ಅವರ ಧರ್ಮಪತ್ನಿ ಶ್ರೀಮತಿ ವಿಜಯಾ ಗಣೇಶಗುಡಿ ಅವರು ತಮ್ಮ ಪತಿಯ ನೆನಪುಗಳನ್ನು ಮೆಲುಕುಹಾಕುತ್ತಾ "ಅವರು ಯಾವಾಗಲೂ ಕೆಲಸದಾಗೇ ಇರ್ತಿದ್ರು. ವಿಶ್ರಾಂತಿ ತೊಗೋಳ್ರಿ ಅಂದ್ರ, 'ಕೆಲಸಾನೇ ನನ್ನ ವಿಶ್ರಾಂತಿ' ಅಂತಿದ್ರು. ಹಗಲು ರಾತ್ರಿ ಚಿತ್ರಗಳ ಬಗ್ಗೆ ಚಿಂತಿಸುತ್ತಿದ್ರು. ಕೈತುಂಬ ಕೆಲಸ, ಊಟಾ ನಿದ್ದೆಗೂ ಬಿಡುವಿರಲಿಲ್ಲ. ಆ ಊರು ಈ ಊರು ಅಂತ ತಿರಗೋದು, ಹೊರೀ ಚಿತ್ರಗಳನ್ನು ತಯಾರಿಸಿ ಮನೀಗಿ ಬರ್ತಿದ್ರು. ಹಾಂಗಂತ ಸಂಸಾರದ ಕಡೀಗಿ ಲಕ್ಷ ಕೊಡಲಿಲ್ಲಾಂತ್ಹಿಲ್ಲ. ಮನೀ ಬಗ್ಗೆ ಕಾಳಜಿಯಿತ್ತು. ಮಕ್ಕಳ ಶಿಕ್ಷಣದ ಬಗ್ಗೆ ಭಾಳ ಕಾಳಜಿ ವಹಿಸುತ್ತಿದ್ದರು. ಹಾಂಗಂತ ಒಬ್ಬ ಮಗ ಚಿ. ಹೇಮಂತ್ ಸಾಫ್ಟ್‌ವೇರ್ ಇಂಜಿನಿಯರ್ ಆಗಿ ಅಮೇರಿಕಾದಲ್ಲಿದ್ದಾನೆ. ಇನ್ನೊಬ್ಬ ಮಗ ಚಿ. ಶೀತಲ್ ಇಂಜಿನಿಯರಿಂಗ್ ವ್ಯಾಸಂಗ ಮಾಡುತ್ತಿದ್ದಾನೆ.

ಮಗಳು ಶಿಲ್ಪಾ ಬಿ.ಎಫ್.ಎ. ಓದಿ ಉತ್ತಮ ಕಲಾವಿದೆ ಆಗಿದ್ದಾಳೆ. ಆಕೀಗಿ ಚಿತ್ರಕಲೆಯಲ್ಲಿ ಭಾಳ ಆಸಕ್ತಿ. ಆಕೀನೂ ಭಾಳಷ್ಟು ತೈಲವರ್ಣ ಮತ್ತು ಜಲವರ್ಣದ ಚಿತ್ರಗಳನ್ನು ಚಿತ್ರಿಸುತ್ತಾಳೆ, ತನ್ನ ಸಂಸಾರ ಜೀವನದಲ್ಲಿ ಸುಖದಿಂದಿದ್ದಾಳೆ. ಗಂಡ, ಅತ್ತೆಮಾವಂದಿರ ಪ್ರೀತಿ ವಿಶ್ವಾಸದಿಂದ ಕಲಾಸೇವೆಯನ್ನು ಮುಂದುವರಿಸಿದ್ದಾಳೆ.

"ಅವರ ಮೇಲೆ ಯಾವ ಹಿರಿಯ ಕಲಾವಿದರ ಪ್ರಭಾವವಾಗಿತ್ತು?" ಪ್ರಶ್ನೆ

"ಪ್ರಭಾವ ಹಾಗಂತ ಏನೂ ಇರಲಿಲ್ಲ. ಅವರು ತಮ್ಮದೇ ಶೈಲಿಯನ್ನು ರೂಪಿಸಿಕೊಂಡಿದ್ದರು. ಆದರೆ ದೇಶ ವಿದೇಶದ ನಾಡಿನ ಕಲಾವಿದರ ಬಗ್ಗೆ ಅವರಲ್ಲಿ ಗೌರವವಿತ್ತು. ಹಿರಿಯ ಕಲಾವಿದರ ಚಿತ್ರಗಳನ್ನು ನೋಡಿ ಮೆಚ್ಚಿಕೊಳ್ಳುತ್ತಿದ್ದರು."

* **"ನವ್ಯಕಲೆಯ ಬಗ್ಗೆ ಅವರ ಅಭಿಪ್ರಾಯವೇನಿತ್ತು?"**
  "ಭಾಳ ಮೆಚ್ಚಿಕೊಂಡಿದ್ದರು. ಅನೇಕ ಸಲ ಈ ನವ್ಯ ಶೈಲಿಯ ಬಗ್ಗೆ ತಿಳಿಸಿ ಹೇಳುತ್ತಿದ್ದರು. ಅಭಿವ್ಯಕ್ತಿಯ ಈ ಹೊಸ ಶೈಲಿ ಭಾಳ ಪರಿಣಾಮಕಾರಿಯಾಗಿದೆ ಎಂದು ಹೇಳುತ್ತಿದ್ದರು."
* **"ಹಾಗಿದ್ದಲ್ಲಿ ನವ್ಯ ಶೈಲಿಯ ಚಿತ್ರಗಳನ್ನು ಅವರು ಯಾಕೆ ಬಿಡಿಸಲಿಲ್ಲ?"**
  "ಏನೋ ಗೊತ್ತಿಲ್ಲ. ಅವರು ಬರೆದ ನವ್ಯಶೈಲಿಯ ಚಿತ್ರ ಮಾಡಿದ ಶಿಲ್ಪ ಕೆಲವೊಂದಿಷ್ಟಿವೆ".
* **"ಸಾಹಿತ್ಯ ಮತ್ತು ಕಲೆಯ ಗ್ರಂಥಗಳ ಅಭ್ಯಾಸ ಮಾಡುತ್ತಿದ್ದರೆ?"**
  ಭಾಳ ಓದುತ್ತಿದ್ದರು. ನನ್ನ ಜೊತೆಗೆ ಮಕ್ಕಳ ಜೊತೆ ಚರ್ಚೆನೂ ಮಾಡುತ್ತಿದ್ದರು.
* **"ಹಾಸ್ಯಪ್ರಜ್ಞೆ?"**
  "ಸರ್, ಯಾವಾಗಲೂ ನಗುನಗ್ತಾನೇ ಇರ್ತಿದ್ರು, ಒಂದು ದಿನಾನೂ ಮುಖಾ ಗಂಟ್ಹಾಕಿದ್ದು ನಾವು ನೋಡೇ ಇಲ್ಲ."

* "ಮಗಳಿಗೆ ಮಾರ್ಗದರ್ಶನ ಮಾಡುತ್ತಿದ್ದರೆ?"

  "ಹೌಂದರಿ, ಮ್ಯಾಲಿಂದ ಮ್ಯಾಲ ತಿಳ್ಸಿಹೇಳ್ತಿದ್ರು 'ಏನ್ ಮಾಡ್ತಿದ್ವಿ?" ಅಂತ ಕೇಳ್ತಿದ್ರು. ತಮ್ಮ ಹಾಂಗೇ ತಮ್ಮ ಮಕ್ಕಳು ಕಲಾವಿದರಾಗಬೇಕೆಂಬ ಆಸೆ ಅವರಲ್ಲಿತ್ತು. ಲ್ಯಾಂಡ್‌ಸ್ಕೇಪ್ ಮತ್ತು ಪೋಟ್ರೇಚರ್‌ಗೆ ಒತ್ತು ಕೊಡುತ್ತಿದ್ದರು.

* "ನೀವು ಅವರಿಗೆ ಯಾವ ರೀತಿಯಿಂದ ಸಹಕಾರ ನೀಡುತ್ತಿದ್ದಿರಿ?"

  "ಅವರು ಬಯಸಿದ ಸಹಕಾರ ನಮ್ಮ ಕರ್ತವ್ಯವಲ್ಲವೆ? ಯಾವ ಅಡೆತಡೆಯಿಲ್ಲದೆ ಅವರ ಕಲಾಜೀವನ ಸುಖದಿಂದ ಸಾಗಬೇಕೆಂಬಾಸೆಯೇ ನಮ್ಮೆಲ್ಲರದಾಗಿತ್ತು."

ಶ್ರೀ ಗಣೇಶಗುಡಿ ಅವರ ಇತರೆ ಸಾಂಘಿಕ ಚಟುವಟಿಕೆಗಳು ಈ ಕೆಳಗಿನಂತಿವೆ.

1. 1993ರಲ್ಲಿ ಕುವೆಂಪು ವಿಶ್ವವಿದ್ಯಾನಿಲಯ, ಬಿ.ಆರ್. ಪ್ರಾಜೆಕ್ಟ್‌ಗಾಗಿ ನೇಮಿಸಲಾದ ಸ್ನಾತಕಪೂರ್ವ ಕಲೆ ಮತ್ತು ಕರಕುಶಲ ಅಧ್ಯಯನ ಮಂಡಲಿಯಲ್ಲಿ ಸದಸ್ಯರಾಗಿದ್ದು
2. 'ಕಾವಾ ಮೈಸೂರು' ಇವರ ಶಿಲ್ಪಕಲಾ ಪದವಿ ಪರೀಕ್ಷೆಗಳ ಪರೀಕ್ಷಕ ಮತ್ತು ಮೌಲ್ಯಮಾಪಕ, 1994
3. ಕರ್ನಾಟಕ ಚಿತ್ರಕಲಾ ಪರಿಷತ್, ಬೆಂಗಳೂರು - ಶಿಲ್ಪಕಲಾ ಪದವಿ ಪರೀಕ್ಷೆಯ ಪರಿವೀಕ್ಷಕರು ಮತ್ತು ಮೌಲ್ಯಮಾಪಕರು
4. ಸಲಹಾ ಮಂಡಲಿಯ ಸದಸ್ಯ - ಲಲಿತಕಲಾ ಕಾಲೇಜು, ದಾವಣಗೆರೆ
5. ಸದಸ್ಯರು, ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು
6. ಸದಸ್ಯರು, ಕರ್ನಾಟಕ ಉಚ್ಚ ಕಲಾ ಪರೀಕ್ಷಾ ಮಂಡಳಿ, ಬೆಂಗಳೂರು
7. ಸದಸ್ಯರು, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ದಾವಣಗೆರೆ - ಕಲಾ ಪ್ರದರ್ಶನ ಸಮಿತಿ, 1992
8. ಮುಂಬಯಿ ಆರ್ಟ್ ಸೊಸಾಯಿಟಿ ಸದಸ್ಯರು
9. ಗೌರವ ಕಾರ್ಯದರ್ಶಿಗಳು, ಅಧ್ಯಾಪಕರ ಸಂಘ, ಚಿತ್ರಕಲಾ ಮಹಾವಿದ್ಯಾಲಯ, ದಾವಣಗೆರೆ
10. ಕಲಾ ಪಂಚಮಿ, ದಾವಣಗೆರೆ, ಸಂಚಾಲಕರು
11. ಚಿತ್ರದುರ್ಗ ಜಿಲ್ಲಾ ಕರಕುಶಲ ಮಂಡಳಿಯ ಸಹ ಕಾರ್ಯದರ್ಶಿಗಳು
12. ಜಿಲ್ಲಾ ಅಧ್ಯಕ್ಷರು, ಕರ್ನಾಟಕ ವಿಶ್ವಕರ್ಮ ಸಾಹಿತ್ಯ ಕಲೆ ಅಕಾಡೆಮಿ, (ಚಿತ್ರದುರ್ಗ ಜಿಲ್ಲೆ)
13. ಅಧ್ಯಕ್ಷರು, ವಿಶ್ವಕರ್ಮ ಕಲಾ ಮತ್ತು ಕ್ಷೇಮಾಭಿವೃದ್ಧಿ ಸಂಘ, ದಾವಣಗೆರೆ

ಈ ರೀತಿಯಾಗಿ ಬೇರೆ ಬೇರೆ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ಮಿತಿಮೀರಿ ಕೆಲಸ ಮಾಡುತ್ತಿರುವುದರಿಂದ ಅವರ ಆರೋಗ್ಯದ ಮೇಲೆ ಕೆಟ್ಟ ಪ್ರಭಾವ ಕಾಣಿಸಿಕೊಂಡಿತು. ತಮ್ಮ ಆರೋಗ್ಯದ ಕಡೆಗೆ ಎಷ್ಟು ಗಮನ ಕೊಡಬೇಕಾಗಿತ್ತು ಅಷ್ಟು ಕೊಡಲಿಲ್ಲ. ಸದಾ ಹಸನ್ಮುಖಿಯಾಗಿ, ತಮ್ಮ ಕೆಲಸಕಾರ್ಯಗಳನ್ನು ಮುಂದುವರಿಸಿಕೊಂಡು ಹೋಗುತ್ತಿದ್ದರು. ವೃತ್ತಿ ಮತ್ತು ಪ್ರವೃತ್ತಿ ಒಂದೇ ಆಗಿದ್ದರಿಂದ ಗಣೇಶಗುಡಿಯವರು ತಮ್ಮ ಕಲೆಯ ಜೊತೆಗೆ ಏಕರೂಪರಾಗಿದ್ದರು.

ಗಣೇಶಗುಡಿ ಅವರ ಚಿತ್ರ ರಚಿಸುವ ಶೈಲಿ, ಒಂದು ರೀತಿಯಿಂದ ಪಾರಂಪರಿಕ ಶೈಲಿ ಎಂದೇ ಹೇಳಬೇಕು. ಕೆಲವು ಕಡೆಗಳಲ್ಲಿ ಪ್ರಯೋಗಶೀಲತೆ ಕಂಡರೂ ಅವರು ತಾವು ಹಾಕಿಕೊಂಡ ಲಕ್ಷ್ಮಣರೇಖೆಯನ್ನು ಎಂದೂ ದಾಟಲಿಲ್ಲ. ಶಿಕ್ಷಕರಾಗಿದ್ದರಿಂದ ಬೋಧನಾ ಪದ್ಧತಿಯೂ ಒಂದು ಚೌಕಟ್ಟಿನಲ್ಲಿಯೇ ಇರುವುದು ಅನಿವಾರ್ಯವೇ ಸರಿ. ಸೆಲೆಬಸ್, 'ಕರಿಕುಲಂ'ಗಳಂಥ ಬಂಧನದಿಂದ ಹೊರಬರುವುದು ಸಾಧ್ಯವಾಗುವುದಿಲ್ಲ. ವಿದ್ಯಾರ್ಥಿಗಳಿಗೆ ಪರೀಕ್ಷೆ ಎಂಬ ಒಂದು ಗುರಿ ಇರುತ್ತದೆ. ಆ ಗುರಿಯನ್ನು ತಲುಪಿಸುವ ಕೆಲಸ ಗುರುಗಳದ್ದಾಗಿರುತ್ತದೆ. ಈ ದೃಷ್ಟಿಯಿಂದ ಗಣೇಶಗುಡಿಯವರು ಒಬ್ಬ ಆದರ್ಶ ಗುರುಗಳಾಗಿದ್ದರು. ಇದರ ಜೊತೆಗೆ ವಿದ್ಯಾರ್ಥಿಗಳಲ್ಲಿದ್ದ ಸುಪ್ತ ಪ್ರತಿಭೆಯನ್ನು ಗುರುತಿಸಿ ಅವರನ್ನು ಯೋಗ್ಯ ದಾರಿಗೆ ತರುವಲ್ಲಿ ಶ್ರಮಿಸುತ್ತಿದ್ದರು.

ಶಿಲ್ಪಕಲೆಯಲ್ಲಿನ ವಿಶೇಷ ಆಸಕ್ತಿಯಿಂದ, ಆ ಕಲೆಯ ಕಡೆಗೆ ಅವರು ಹೆಚ್ಚು ಗಮನ ಕೊಟ್ಟಂತೆ ಕಾಣುತ್ತದೆ. ಚಿತ್ರಕಲೆಯಲ್ಲಿ ಕಾಣದಿರುವ ವೈವಿಧ್ಯತೆ ಶಿಲ್ಪಕಲೆಯಲ್ಲಿ ಕಂಡುಬರುತ್ತದೆ. ಶಿಲ್ಪಕಲಾಕೃತಿಗಳೂ ತುಂಬ ಆಧುನಿಕವೆಂದೂ ಹೇಳಲಿಕ್ಕಾಗುವುದಿಲ್ಲ. ಇದರರ್ಥ ಆಧುನಿಕ ಶೈಲಿಯಿಂದ ಅವರು ಅಪರಿಚಿತರಿದ್ದರೇನೆಂದಲ್ಲ. ಶಿಲ್ಪ ಕಲಾಕೃತಿಗಳು ಹೆಚ್ಚು ಕಡಿಮೆ ಬೇಡಿಕೆಯಂತೆ ತಯಾರಿದ್ದವುಗಳು. ಈ ಕಾರಣದಿಂದಾಗಿ ಇಂಥವುಗಳಲ್ಲಿ ಪ್ರಯೋಗನಾತ್ಮಕ ರಚನಾ ಕೌಶಲ್ಯ, ಎಲ್ಲ ಕೃತಿಗಳಲ್ಲಿಯೂ ಎದ್ದು ಕಾಣಿಸುತ್ತದೆ. ಬೃಹದಾಕಾರದ ಶಿಲ್ಪಗಳಲ್ಲಿಯೂ, ಭಾವಸೌಮ್ಯತೆ ಮತ್ತು ಸಾಂಗತ್ಯಪೂರ್ಣ ಅವಯವ ರಚನೆಯಿಂದ ಶಿಲ್ಪಗಳು ಆಕರ್ಷಕವಾಗಿ ಕಂಡುಬರುತ್ತವೆ. ಬೇರೆ ಸಹಾಯಕ ಕಲಾವಿದರ ಸಹಾಯ, ತುಂಬ ಸೀಮಿತಗೊಳಿಸಿದ್ದರಿಂದ ಗಣೇಶಗುಡಿಯವರ ಕೃತಿಗಳಲ್ಲಿ ಅವರದೇ 'ಸ್ಪರ್ಶ' ಕಲಾಕೃತಿಗಳಲ್ಲಿ ದೃಷ್ಟಿಗೋಚರವಾಗುತ್ತದೆ. ಅವರ ಕೈಯಲ್ಲಿ ಒಂದು ರೀತಿಯ 'ಲಿರಿಕಲ್ ಮೂವ್‌ಮೆಂಟ್' ಇದ್ದಿರಬಹುದು. ಈ ಲಯಾತ್ಮಕ ಚಲನೆಯಿಂದಲೇ ಕಲಾಕೃತಿಗಳಲ್ಲಿ ಸೌಂದರ್ಯ ಮೂಡಿಬಂದಂತಿದೆ.

14" x 18" x 6" ಈ ಅಳತೆಯಲ್ಲಿ ನಿರ್ಮಿಸಿದ ವಿಶ್ವರೂಪದರ್ಶನ ಮತ್ತು ಗೀತೋಪದೇಶವೆಂಬ ಅವರ Relief Sculpture ದಾವಣಗೆರೆಯ ಗೀತಾಮಂದಿರದಲ್ಲಿದೆ. ಈ ಕೃತಿ ಅವರ ಶಕ್ತಿಸಾಮರ್ಥ್ಯವನ್ನು ಪ್ರದರ್ಶಿಸುತ್ತದೆ. ಗೀತಾಮಂದಿರದಲ್ಲಿಯೋ 'ಸೂರ್ಯದೇವ' 'Relief sculpture'ವೂ ಅದ್ಭುತವಾಗಿದೆ. ಗೀತಾಮಂದಿರದಲ್ಲಿನ ಇವರ ಮೂರು ಕಲಾಕೃತಿಗಳು ಆ ಮಂದಿರದ ಸೌಂದರ್ಯವನ್ನು ಹೆಚ್ಚಿಸಿವೆ.

ಗಣೇಶಗುಡಿಯವರಲ್ಲಿ ಸಾಮಾಜಿಕ ಕಳಕಳಿ ಇತ್ತು. ಸಮಾಜದಲ್ಲಿನ ಅಸಹ್ಯಕರ ಪದ್ಧತಿಯನ್ನು ಹೋಗಲಾಡಿಸಿ ಜನರ ಮನಸ್ಸು, ಕಲೆ, ಸಾಹಿತ್ಯ, ಸಂಗೀತ ಮತ್ತು ಇತರ ಜ್ಞಾನ–ವಿಜ್ಞಾನ ಕಡೆಗೆ

ಹೊರಳಬೇಕೆಂಬುದು ಅವರ ಆಸೆಯಾಗಿತ್ತು. ಈ ವಿಚಾರಗಳನ್ನು ವಿದ್ಯಾರ್ಥಿಗಳಲ್ಲಿ ಬಿಂಬಿಸುವ ಪ್ರಯತ್ನ ಮಾಡುತ್ತಿದ್ದರು. ವಿಶ್ವಕರ್ಮ ಸಮಾಜದ ಏಳ್ಗೆಗಾಗಿ ಅವರು ಸಕ್ರಿಯವಾಗಿ ದುಡಿಯುತ್ತಿದ್ದರು. ಸಂಕುಚಿತ ಮನೋಭಾವದವರಾಗಿರಲಿಲ್ಲ.

ಜಲವರ್ಣ ಕಲಾವಿದರಾಗಿ ಮತ್ತು ಶಿಲ್ಪ ಕಲಾವಿದರಾಗಿ ಅವರು ಸಾಧಿಸಿದ್ದು ಬಹಳಷ್ಟಾಗಿದೆ. ಮಾನ-ಮರ್ಯಾದೆ, ಗೌರವಗಳು ಬಂದರೂ ಅಹಂಕಾರದಿಂದ ಸಂಪೂರ್ಣ ಮುಕ್ತರಾಗಿದ್ದರು. ತಾವೂ ಇನ್ನೂ ಕಲಿಯಬೇಕಾಗಿದೆ ಎಂದೇ ಹೇಳುತ್ತಿದ್ದರು. ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ಕೆಲಸ ಮಾಡಿದರೆ ಅದಕ್ಕೆ ಖಂಡಿತ ಫಲ ಸಿಗುತ್ತದೆಂದು ಅವರು ನಂಬಿದ್ದರು.

ಬೆಂಗಳೂರಿನ ಶಾರದಾ ಕಲ್ಯಾಣ ಮಂಟಪಕ್ಕೆ ಬಂದರೆ 10"x30" ಅಡಿಯಷ್ಟು ಗಾತ್ರದ ಶ್ರೀನಿವಾಸ ಕಲ್ಯಾಣವೆಂಬ ಒಂದು ರಿಲೀಫ್ ಶಿಲ್ಪಾಕೃತಿ ನೋಡಬಹುದು. ಆ ಕೃತಿಗಳ ಗೊಂದಲದಲ್ಲಿಯೂ ಯಾವ ಆಕೃತಿಯೂ ಮತ್ತೊಂದು ಆಕೃತಿಯ ಮೇಲೆ ಏರಿಬರುವುದಿಲ್ಲ. ಎಲ್ಲವೂ ಸ್ಫುಟವಾಗಿ ಕಾಣಿಸುತ್ತವೆ. ಸಮಗ್ರ ಚಿತ್ರ ಒಂದೇ unit ಆಗಿ ಕಾಣಿಸುತ್ತದೆ. ವಿನ್ಯಾಸ, ಬಣ್ಣಗಳ ಬಳಕೆ, ಅನುಪಾತ, ಎಲ್ಲವೂ ತುಂಬ ಆಕರ್ಷಕವಾಗಿವೆ. ಚಿತ್ರ ಒಂದು ರೀತಿಯ ಮಂಗಲ ವಾತಾವರಣವನ್ನು ನಿರ್ಮಿಸುವಲ್ಲಿ ಯಶಸ್ವಿಯಾಗಿದೆ. ವಿಜಯಕಲಾಮಂದಿರದಲ್ಲಿದ್ದ Life size ಶಿಲ್ಪ ಕಲಾಕೃತಿ – 'ಬರಿಮೈಯಿಂದ ಕೈಯಲ್ಲಿ 'ಏಕತಾರಿ'ಯನ್ನು ಹಿಡಿದು ಕೂತಿರು, ಅಂಥ ವ್ಯಕ್ತಿ ಕಲಾವಿದರ ಸೂಕ್ಷ್ಮದೃಷ್ಟಿಗೆ ಸಾಕ್ಷಿಯಾಗಿದೆ. ಶ್ರೀ ಜಗಜ್ಯೋತಿ ಬಸವೇಶ್ವರರ 'ಬಸ್ಟ್' ದಾವಣಗೆರೆಯ ಸೌಂದರ್ಯವನ್ನು ಹೆಚ್ಚಿಸಿದೆ. ಹುಬ್ಬಳ್ಳಿಯ ಮೆಡಿಕಲ್ ಕಾಲೇಜಿನಲ್ಲಿನ ಶಿಲ್ಪಗಳು ಗಣೇಶಗುಡಿಯವರ ಕಲಾನಿಪುಣತೆಯನ್ನು ಸಾರಿ ಹೇಳುತ್ತವೆ. ದಾವಣಗೆರೆಯ ಸರಕಾರಿ ಆಸ್ಪತ್ರೆಯಲ್ಲಿನ 'Hippocratus' ಭಿತ್ತಿಚಿತ್ರ ಗಮನಾರ್ಹವಾಗಿದೆ.

1997ರ ಮಾರ್ಚ್ ತಿಂಗಳಿನಲ್ಲಿ ಏರ್ಪಡಿಸಲಾದ ಕಲಾ ಶಿಬಿರ ಈ ಶಿಬಿರ ಮಥುರಾದಲ್ಲಿ ಸಂಘಟಿಸಲಾಗಿತ್ತು. ಗಣೇಶಗುಡಿ ಅದರಲ್ಲಿ ಭಾಗವಹಿಸಿದ್ದರು. ಈ ಶಿಬಿರಕ್ಕೆ 'ಲೋಕಚಿತ್ರಕಾರ ಶಿಬಿರ' ಎಂದು ಹೆಸರಿಸಲಾಗಿತ್ತು. ಮಥುರಾದಲ್ಲಿನ ಒಂದು ಹಿಂದಿ ಭಾಷೆಯ 17.3.1997ರ ಪತ್ರಿಕೆಯಲ್ಲಿ ಗಣೇಶಗುಡಿಯವರನ್ನು ಕುರಿತು ಬರೆದ ಸಾಲುಗಳು ಹೀಗಿವೆ.

ಶಿಬಿರದಲ್ಲಿ ದಾವಣಗೆರೆ, ಕರ್ನಾಟಕದಿಂದ ಬಂದ, ಲಲಿತಕಲಾ ಅಕಾಡೆಮಿಯಿಂದ 1995ರ ಬಹುಮಾನ ಪಡೆದ ಟಿ.ವಿ. ಗಣೇಶಗುಡಿಯವರ ಚಿತ್ರಗಳು ವಿಶೇಷ ಪ್ರಶಂಸೆಗೆ ಪಾತ್ರವಾದವು.

ಈ ಶಿಬಿರದಲ್ಲಿ ಓಡಿಸಾ, ಬಿಹಾರ, ರಾಜಸ್ತಾನ, ಪಂಜಾಬ್, ಆಂಧ್ರಪ್ರದೇಶ ಮುಂತಾದ ಕಡೆಯಿಂದ ಹೆಸರಾಂತ ಕಲಾವಿದರು ಭಾಗವಹಿಸಿದ್ದರು. ಅವರೆಲ್ಲರಲ್ಲಿ ವಿಶೇಷ ಗಮನ ಸೆಳೆದವರೆಂದರೆ ಗಣೇಶಗುಡಿ ಅವರು.

ಜಾತಿ ಮತ್ತು ಹಣ ಅವರನ್ನು ದಾರಿತಪ್ಪಿಸಲಿಲ್ಲ. ಮಾನ ಸನ್ಮಾನ ಪ್ರಶಸ್ತಿಗಳಿಂದ ಅಹಂಕಾರ ಬರಲಿಲ್ಲ. ಕೊನೆಯುವರೆಗೂ ತುಂಬ ವಿನಯಶೀಲರಾಗಿದ್ದರು. ಮಗುವಿನಂತೆ ಮುಗ್ಧರಾಗಿದ್ದರು. ಹೆಚ್ಚು ಹೆಚ್ಚು ಕಲಿಯಬೇಕೆಂಬ ಆಸೆ ಅವರಿಗಿತ್ತು. ಸಹಕಲಾವಿದರೊಂದಿಗೆ ಪ್ರಾಧ್ಯಾಪಕವರ್ಗದವರೊಂದಿಗೆ

ಸ್ನೇಹಪೂರ್ಣ ಸಂಬಂಧಗಳಿದ್ದವು. ಅವರ ಈ ಸಹಜಸ್ವಭಾವದಿಂದ ಎಲ್ಲರಿಗೂ ಪ್ರಿಯವಾಗಿದ್ದರು.

ನಿಸರ್ಗ ಚಿತ್ರ ಬರೆಯುವುದರಲ್ಲಿ ಅವರಿಗೆ ವಿಶೇಷ ಆಸಕ್ತಿ ಇತ್ತು. ಬೆಳಕುನೆರಳಿನ ಆಟದಿಂದ ಅವರು ಮಂತ್ರಮುಗ್ಧರಾಗುತ್ತಿದ್ದರು. ಪುರಾತನ ದೇವಾಲಯಗಳೆಂದರೆ ಅವರಿಗೆ ಬಹಳ ಪ್ರೀತಿ. ಈ ದೇವಾಲಯ ಮತ್ತು ಕಟ್ಟಡಗಳಿಗೆ ಸಂಬಂಧಿಸಿದ ಇತಿಹಾಸ ಹುಡುಕದೆ, ಅವುಗಳಲ್ಲಿ ಅಡಗಿಕೊಂಡಿದ್ದ ಕಲೆಯನ್ನು ಹುಡುಕುತ್ತಿದ್ದರು. ತಮ್ಮ ಕಲಾಕೃತಿಗಳಲ್ಲಿನ 'ಸ್ಪೇಸ್'ಗೆ ಬಹಳ ಮಹತ್ವ ಕೊಡುತ್ತಿದ್ದರು. ಸ್ಪೇಸ್ ಮತ್ತು ಆಕೃತಿಗಳಲ್ಲಿ ಸಾಂಗತ್ಯವನ್ನು ಸ್ಥಾಪಿಸುವ ದಿಶೆಯಲ್ಲಿ ಅವರಲ್ಲಿ ವಿಶೇಷ ನೈಪುಣ್ಯವಿತ್ತು. ಅವರ ಎಲ್ಲ ಚಿತ್ರಗಳಲ್ಲಿ ಸಂಗೀತದ 'ಲಯ' ಕಾಣಿಸುತ್ತದೆ.

ತೆಳುವಾದ ಬಣ್ಣಗಳಲ್ಲಿ ರೂಪಾಕೃತಿಗಳನ್ನು ತಯಾರಿಸುವಲ್ಲಿ ಸಿದ್ಧಹಸ್ತರಾಗಿದ್ದರು. ಅವರ ಚಿತ್ರಗಳಲ್ಲಿ ದಟ್ಟ ಬಣ್ಣದ ಲೇಪನ ಕಾಣಿಸುವುದಿಲ್ಲ. ಕುಂಚದ ಉಪಯೋಗ ಮಾಡಿಕೊಳ್ಳುವ ವಿಧಾನವೂ ಅವರದೇ ಆಗಿತ್ತು. ರಭಸದ ಪ್ರಯೋಗ ಎಲ್ಲಿಯೂ ಕಾಣುವುದಿಲ್ಲ. ಹಗುರಾದ ಸ್ಪರ್ಶದಿಂದ ಬಿಂಬಗಳನ್ನು ತಯಾರಿಸುವ ಶೈಲಿ ಅವರದಾಗಿತ್ತು. ದೊಡ್ಡ ದೊಡ್ಡ ಪುಸ್ತಕಗಳೂ ತುಂಬ ಹಗುರಾದವುಗಳೆಂಬ ಭಾವನೆಯನ್ನು ಮೂಡಿಸುತ್ತವೆ.

ಪ್ರಾಕೃತಿಕ ದೃಶ್ಯಗಳಲ್ಲಿ ಮನುಷ್ಯ ಗೌಣವಾಗಿ ಕಾಣುತ್ತಾನೆ. ಕೆಲವು ಚಿತ್ರಗಳು ಮಾನವಾಕೃತಿಗಳಿಂದ ಕೂಡಿದ್ದಾಗಿದ್ದರೂ ಈ ಆಕೃತಿಗಳು ಅಸ್ಪಷ್ಟವಾಗಿಯೇ ಇವೆ. ಕಲಾಕೃತಿಯ ಬೃಹತ್ ಅಭಿವ್ಯಕ್ತಿಯಲ್ಲಿ ಮಾನವಾಕೃತಿಗಳು ಮೂಕವಿಸ್ಮಿತವಾಗಿ ನಿಲ್ಲುತ್ತವೆ. ರೂಪಾಕೃತಿಗಳು ಒಂದರಲ್ಲೊಂದು ಬೆರೆತುಕೊಂಡಂತೆ ಕಾಣಿಸುತ್ತವೆ. ಸ್ಪಷ್ಟ ರೇಖೆಗಳೇ ಇವರ ಚಿತ್ರಗಳಲ್ಲಿಲ್ಲ. ಆಕೃತಿಗಳು ಒಂದರಲ್ಲೊಂದು ಬೆರೆತಂತೆ ಕಾಣಿಸುತ್ತವೆ.

ಹಂಪೆಯ ಅವಶೇಷಗಳು ಗಣೇಶಗುಡಿ ಅವರ ಆಕರ್ಷಣೆಯ ಕೇಂದ್ರವಾಗಿದ್ದವು. ಹಾಳುಬಿದ್ದ ಹಂಪೆಯ ಗತವೈಭವವನ್ನು ಸಾರುವ ಅವಶೇಷಗಳು ಗಣೇಶಗುಡಿಯ ಚಿತ್ರಣದಿಂದ ಶಾಶ್ವತವಾಗುಳಿದಿವೆ.

ಮೈಸೂರು ದಸರಾ ವಸ್ತುಪ್ರದರ್ಶನ 1977, 1979, 1983 – ಮೊದಲನೇ ಬಹುಮಾನ ಪಡೆದ ಚಿತ್ರಗಳು ಗಮನಾರ್ಹವಾಗಿವೆ.

ಗಣೇಶಗುಡಿ ಅವರ ಮಗಳು ಶಿಲ್ಪಾ ಖಡಕಭಾವಿ ಅವಳಿಗೂ ಚಿತ್ರಕಲೆ ಎಂದರೆ ಸಾಕು ಮೈ ಪುಳಕಿತವಾಗುತ್ತದೆ. ಇವಳು ಹಲವಾರು ವರ್ಣಚಿತ್ರಗಳನ್ನು ರಚಿಸಿದ್ದಾಳೆ. ತಮ್ಮ ತಂದೆಯ ಬಗ್ಗೆ ತುಂಬಾ ಹೆಮ್ಮೆಯಿಂದ ಮಾತಾಡುತ್ತಾಳೆ.

"ಹುಟ್ಟಿದಾಗಿನಿಂದ ಮನೀವಳ್ಗೆ ಕಲೆಯ ವಾತಾವರಣ ಕಂಡಿದ್ದೇನೆ. ಅಪ್ಪ ಯಾವಾಗಲೂ ಕೆಲಸದಲ್ಲಿ ಮಗ್ನರಾಗಿರುತ್ತಿದ್ದರು. ಅವರು ಚಿತ್ರ ಬರೆಯುವಾಗ, ಬಣ್ಣ ಹಚ್ಚುವಾಗ, ಶಿಲ್ಪ ತಯಾರಿಸುವಾಗ, ನಾನು ಬಹಳ ಉತ್ಸುಕತೆಯಿಂದ ನೋಡುತ್ತಿದ್ದೆ. ಅದೇನು? ಇದೇನು? ಎಂದು ಕೇಳಿದರೆ ಸಾಕು, ಅಪ್ಪ ನಿಧಾನವಾಗಿ ಒಂದೊಂದೇ ವಿಷಯವನ್ನು ತಿಳಿಸುತ್ತಿದ್ದರು. ನನ್ನ ಕೈಯಲ್ಲಿ ಪೆನ್ಸಿಲನ್ನು ಕೊಟ್ಟು ಹಾಳೆಯ ಮೇಲೆ ಹಸುಳೆ, ಕಾಗೆ, ಗುಬ್ಬಿಗಳ ಚಿತ್ರಗಳನ್ನು, ಗಿಡಮರಗಳನ್ನು ಬಿಡಿಸಲು ಹೇಳುತ್ತಿದ್ದರು. ಬಣ್ಣಗಳನ್ನು ಹೇಗೆ ತಯಾರಿಸಬೇಕೆಂದು, ಅವುಗಳನ್ನು ಬಳಸುವ ವಿಧಾನವನ್ನು ಹೇಳಿಕೊಡುತ್ತಿದ್ದರು. ಚಿಕ್ಕ ವಯುಸ್ಸಿನಲ್ಲಿಯೇ ಒಳ್ಳೆಯ ಅಭಿರುಚಿಯನ್ನು ಬೆಳೆಸುವಲ್ಲಿ ಅವರು ಪ್ರಯತ್ನಶೀಲರಾಗಿದ್ದರು. ತಾವು ತಯಾರಿಸಿದ ಚಿತ್ರದ ಬಗ್ಗೆ ವಿಸ್ತಾರವಾಗಿ ಹೇಳುತ್ತಿದ್ದರು.

ಹತ್ತು ಇಪ್ಪತ್ತು ಅಡಿಗಳಷ್ಟು ಎತ್ತರದ ಶಿಲ್ಪಗಳನ್ನು ನೋಡಿ ನನಗೆ ಆಶ್ಚರ್ಯವಾಗುತ್ತಿತ್ತು. ಅವರಲ್ಲಿ ಅದ್ಭುತ ಶಕ್ತಿ ಇದ್ದಿರಬೇಕೆಂದೆನಿಸುತ್ತದೆ. ಎಷ್ಟು ಹೊತ್ತು ಕೆಲಸ ಮಾಡಿದರೂ ಬೇಸರವೆಂಬುದೇ ಅವರಿಗಿರಲಿಲ್ಲ. ಶಾಂತ ಸಮಾಧಾನದ ಸ್ವಭಾವದಿಂದ ಅವರು ನಮ್ಮೆಲ್ಲರ ಪ್ರೀತಿ ಗೌರವಕ್ಕೆ ಪಾತ್ರರಾಗಿದ್ದರು".

ಸಹಜ ಜೀವನ ದೃಷ್ಟಿ ಮತ್ತು ಸಹಜ ನಡೆನುಡಿಗಳಿಂದ ಗಣೇಶಗುಡಿಯವರ ಕಲೆಯಲ್ಲಿಯೂ ಸಹಜತೆ ಮೂಡಿಬಂದಿತ್ತು. 'ಗಿಮಿಕ್ಸ್' ಅವರಿಗೆ ಬೇಕಾಗಿರಲಿಲ್ಲ. ಕೇವಲ ಭಾರತೀಯ ಗ್ರಾಮ್ಯ ಜೀವನದಿಂದ, ದೇಶದ ನೆಲದಿಂದ ನೇರವಾಗಿ ಪ್ರೇರಣೆಯನ್ನು ಪಡೆಯುತ್ತಿದ್ದರು. ದೃಶ್ಯಾತ್ಮಕ ವಿಶ್ವದ ಬಗ್ಗೆ ಅವರಲ್ಲಿ ಅಪಾರ ಪ್ರೀತಿ ಇತ್ತು. ವಿಕೃತ, ಕುರೂಪತೆ, ದೈನ್ಯ ಅವರನ್ನು ಹಿಡಿದಿಡಲಿಲ್ಲ. ಹಾಗಾಗಿ ಪ್ರಯೋಗ ಮತ್ತು ನವ್ಯದ ಹೆಸರಿನಲ್ಲಿ ನಡೆಯುವ ಅಸಂಬದ್ಧತೆ ಅವರ ಚಿತ್ರಗಳಲ್ಲಿ ಕಾಣಿಸುವುದಿಲ್ಲ.

ದಾವಣಗೆರೆಯ ಸಾಂಸ್ಕೃತಿಕ ಜೀವನದಲ್ಲಿ ಗಣೇಶಗುಡಿಯವರ ಸ್ಥಾನಮಾನ ಬಹಳ ಎತ್ತರದಲ್ಲಿತ್ತು. ಅವರ ಸಲಹೆ ಸೂಚನೆಗಳನ್ನು ಎಲ್ಲರೂ ಒಪ್ಪಿಕೊಳ್ಳುತ್ತಿದ್ದರು. ಅವರ ಕೆಲಸಗಳೆಲ್ಲವೂ ಸಾಂಸ್ಕೃತಿಕ ಸಂಪತ್ತನ್ನು ಹೆಚ್ಚಿಸುತ್ತಿದ್ದವು. ಒಂದು ಅಭಿರುಚಿ ಸಂಪನ್ನ ಪರಿಸರವನ್ನು ನಿರ್ಮಿಸಬೇಕೆಂಬುದೇ ಅವರ ಮನೋಗತವಾಗಿತ್ತು. ಕಲೆಯಿಂದ ಮನುಷ್ಯನ ಜೀವನ ಶ್ರೀಮಂತವಾಗುತ್ತದೆಂದು ಅವರು ನಂಬಿದ್ದರು.

ಕೇವಲ ಭೌತಿಕ ಸುಖ ಸೌಕರ್ಯಗಳಿಂದ ಸುಖ ದೊರಕುವುದಿಲ್ಲವೆಂಬ ಅರಿವು ಅವರಲ್ಲಿತ್ತು. ಆಧ್ಯಾತ್ಮದ ಕಡೆಗೆ ಅವರ ಒಲವು ಇತ್ತು. ಧರ್ಮ, ನೀತಿ, ಸತ್ಯಗಳಲ್ಲಿ ಅವರಿಗೆ ವಿಶ್ವಾಸವಿತ್ತು. ಶುದ್ಧಹೃದಯದಿಂದಲೇ ಮಾತ್ರ ಶುದ್ಧ ಕಾರ್ಯ ಮಾಡುವುದು ಸಾಧ್ಯವೆಂದು ಗಣೇಶಗುಡಿ ಅವರು ನಂಬಿದ್ದರು. ತಮ್ಮ ಕೆಲಸ ಪೂಜೆಯಂತೆ ಪವಿತ್ರವೆಂದು ಭಾವಿಸಿದ್ದರು. ನಿಷ್ಠೆ, ಪ್ರಾಮಾಣಿಕತೆಯಿಂದಲೇ ಬದುಕಿನಲ್ಲಿ ಲವಲವಿಕೆ ಇರುತ್ತದೆಂದು ಅವರು ತಿಳಿದುಕೊಂಡಿದ್ದರು. ಕಲೆ ಗುರಿಯಲ್ಲ, ಅದೊಂದು ಜೀವನವನ್ನು ಸಂಪನ್ನಗೊಳಿಸುವ ಮಾಧ್ಯಮವೆಂದು ಅರ್ಥಮಾಡಿಕೊಂಡಿದ್ದರು.

ತಂದೆ ವಿಶ್ವನಾಥಪ್ಪಾ, ತಾಯಿ ಇಂದಿರಾಬಾಯಿ ಅವರ ಸುಪುತ್ರ ಟಿ.ವಿ. ಗಣೇಶಗುಡಿ ಅವರು ದಿನಾಂಕ 24.1.1946ರಲ್ಲಿ ಜನಿಸಿದರು. ತಾಯಿ ತಂದೆ ಇಬ್ಬರೂ ದೈವಭಕ್ತರು. ಸುವರ್ಣಕಾರರ ಮನೆತನ. ಅವರಿಂದ ಅವರ ತಮ್ಮಂದಿರಲ್ಲಿ ಕಲಾಸಕ್ತಿ ಮೂಡಿ ಅವರದು ಕಲಾವಿದರ ಮನೆತನವಾಯಿತು.

ಗಣೇಶಗುಡಿ ಅವರ ಮಗ ಹೇಮಂತಕುಮಾರ ಇಂಜಿನಿಯರ್. ಅಮೇರಿಕೆಯಲ್ಲಿ ಕೆಲಸದಲ್ಲಿದ್ದಾರೆ. ಇವರಿಗೂ ಕಲೆಯಲ್ಲಿ ಬಹಳ ಆಸಕ್ತಿಯಿದೆ. ಮಗಳು ಶಿಲ್ಪಾಳ ಬಗ್ಗೆ ಈಗಾಗಲೇ ಪ್ರಸ್ತಾಪಿಸಲಾಗಿದೆ. ಇನ್ನೊಬ್ಬ ಮಗ ಶೀತಲ್ Talented Research Scholarship ಪಡೆದು ವಿದ್ಯಾಭ್ಯಾಸ ಮುಂದುವರಿಸಿದ್ದಾನೆ. ಇವನಿಗೂ ಕಲೆಯಲ್ಲಿ ಅಭಿರುಚಿಯಿದೆ.

ಸಾಮಾನ್ಯವಾಗಿ ಅನೇಕ ಕಲಾವಿದರು ತಮ್ಮ ಕಾರ್ಯಚಟುವಟಿಕೆಗಳನ್ನು ತಮ್ಮ ಕಲೆಗೆ ಸೀಮಿತಗೊಳಿಸಿರುತ್ತಾರೆ. ಬೇರೆ ವಿಷಯಗಳಲ್ಲಿ ಅವರಲ್ಲಿ ಹೆಚ್ಚಿನ ಆಸಕ್ತಿ ಇರುವುದಿಲ್ಲ. ಆದರೆ ಗಣೇಶಗುಡಿ ಅವರು ಹಾಗಲ್ಲ. ಸಾಮಾಜಿಕ ಕಾರ್ಯ, ಶಿಕ್ಷಣ, ಧರ್ಮ ಹೀಗೆ ಅನೇಕ ವಿಷಯಗಳಲ್ಲಿ ಅವರಿಗೆ ಆಸಕ್ತಿಯಿತ್ತು. ಇದರಿಂದಲೇ ಅವರಿಗೆ ಬಿಡುವಿಲ್ಲದ ಕೆಲಸ. ದಾವಣಗೆರೆಯಲ್ಲಿ ನಡೆಯುವ ಎಲ್ಲ ಕಾರ್ಯಕ್ರಮಗಳಲ್ಲಿ

ಗಣೇಶಗುಡಿಯವರು ಉಪಸ್ಥಿತರಿರಲೇಬೇಕು. ಅವರ ಮಾರ್ಗದರ್ಶನ ಯುವಕರಿಗೆ ಬೇಕು. ಕಲಾವಿದರ ಬಳಗದಲ್ಲಿ ಇವರೇ ಕೇಂದ್ರ ವ್ಯಕ್ತಿ.

ಅನೇಕ ಜವಾಬ್ದಾರಿಯನ್ನು ಸ್ವೀಕರಿಸುವುದು, ಅದನ್ನು ನಿರ್ವಹಿಸಿಕೊಂಡು ಹೋಗುವುದು ಸಾಮಾನ್ಯ ವಿಷಯವೇನಲ್ಲ. ಗಣೇಶಗುಡಿಯವರು ತಮ್ಮ ಆರೋಗ್ಯದ ಕಡೆಗೆ ಲಕ್ಷ್ಯ ಕೊಟ್ಟಿದ್ದರೆ...? ಎಂಬ ಪ್ರಶ್ನೆ ಉದ್ಭವಿಸುತ್ತದೆ. 'ಕೊನೆ' ಅವರಿಗೆ ಗೊತ್ತಿಲ್ಲದಂತೆ ಬರುತ್ತಿತ್ತು. ಇವರ ಕೊನೆಯ ಶಿಲ್ಪಕಲಾಕೃತಿ ಬೃಹದಾಕಾರದ 'ನಟರಾಜ'ನದು. 12x12 ಅಡಿ ಮಣ್ಣಿನಲ್ಲಿ ಪೂರ್ತಿಗೊಂಡು ಅಚ್ಚುಹಾಕಲಿಕ್ಕೆ ಸಿದ್ಧವಾಗಿತ್ತು. ಪ್ರಾಯೋಗಿಕವಾಗಿ ಹೊಸ ಮಾಧ್ಯಮವಾದ ಫೈಬರ್‌ನಲ್ಲಿ ಮೂರ್ತಿ ತಯಾರಿಸುವ ಆಸೆ ಅವರದಾಗಿತ್ತು. ಅಷ್ಟರಲ್ಲಿ ವಿಧಿಯು ತನ್ನ ಕೈವಾಡ ಆವರಿಸಿತು. ಬೆಂಗಳೂರಿನಲ್ಲಿ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯಲಿದ್ದ ಟೆರಾಕೋಟಾ ಕ್ಯಾಂಪಿಗೆ ಹೋಗುವ ಬಯಕೆಯನ್ನು ಹೊತ್ತು ಕೊನೆಯ ಉಸಿರಿನಲ್ಲಿ ಕೂಡ "ಟೆರಾಕೋಟಾ" "ಟೆರಾಕೋಟಾ" "ರವೀಂದ್ರ" ಎನ್ನುತ್ತಾ ಮೂರ್ಛೆ ಹೋದವರು ದೈವಾಧೀನರಾದರು.

ಅವರು ದಿನಾಂಕ 14.5.1998ರಂದು ತಮ್ಮ ಕುಟುಂಬ, ಕಲಾವಿದರ ಬಳಗ, ಹಿತೈಷಿಗಳ ಗುಂಪು, ತಾವು ಪ್ರೀತಿಸಿದ ಊರು, ಎಲ್ಲವನ್ನೂ ಬಿಟ್ಟು ಅನಂತದಲ್ಲಿ ಲೀನವಾದರು. ದಾವಣಗೆರೆಯ ಕಲಾಪ್ರಪಂಚ ಬಡವಾಯಿತು. ಒಬ್ಬ ಸನ್ಮಿತ್ರ, ಶ್ರೇಷ್ಠ ಕಲಾವಿದನ ಅಗಲಿಕೆಯಿಂದ ಕರ್ನಾಟಕದ ಸಹೃದಯ ಜನತೆ ದುಃಖಿಸಿತು.

ವ್ಯಕ್ತಿ ಪರಿಚಯ

ಟಿ.ವಿ.ಗಣೇಶಗುಡಿ

1. ಜನ್ಮದಿನಾಂಕ : 24.1.1946 (52 ವರ್ಷಗಳು)
2. ಜನ್ಮಸ್ಥಳ : ಹಾನಗಲ್ಲು, ಹಾವೇರಿ, ಧಾರವಾಡ ಜಿಲ್ಲೆ (ಕರ್ನಾಟಕ)
3. ವಿಳಾಸ : ನಂ. 527, 'ಶಿಲ್ಪಶ್ರೀ ಕಲಾಮಂದಿರ'
   ಆಂಜನೇಯ ಬಡಾವಣೆ, ದಾವಣಗೆರೆ–577 004
4. ವಿದ್ಯಾರ್ಹತೆ
   1. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಎರಡನೇ ವರ್ಗದಲ್ಲಿ ತೇರ್ಗಡೆ – 1963
   2. "ಆರ್ಟ್ ಮಾಸ್ಟರ್" – ರಾಜ್ಯಕ್ಕೆ 2ನೇ ಸ್ಥಾನ ಮತ್ತು ಸರ್ಕಾರದ ನಗದು ಬಹುಮಾನ – 1968ರಲ್ಲಿ
   3. ಶಿಲ್ಪಕಲೆಯಲ್ಲಿ ಡಿಪ್ಲೊಮಾ – ರಾಜ್ಯಕ್ಕೆ 2ನೇ ಸ್ಥಾನ ಮತ್ತು ಸರ್ಕಾರದ ನಗದು ಬಹುಮಾನ – 1967ರಲ್ಲಿ
   4. ಲಲಿತಕಲೆ (ಪೇಂಟಿಂಗ್‌ನಲ್ಲಿ) ಡಿಪ್ಲೊಮಾ – 1969ರಲ್ಲಿ
   5. "ಅಕೌಂಟ್ಸ್ ಹೈಯರ್" ಇಲಾಖಾ ಪರೀಕ್ಷೆ ಕರ್ನಾಟಕ ಲೋಕಸೇವಾ ಆಯೋಗ, ಕರ್ನಾಟಕ ಸರ್ಕಾರ – 1983
   6. "ಜನರಲ್ ಲಾ" ಇಲಾಖಾ ಪರೀಕ್ಷೆ, ಕರ್ನಾಟಕ ಲೋಕಸೇವಾ ಆಯೋಗ, ಕರ್ನಾಟಕ ಸರ್ಕಾರ– 1985 – ಮೊದಲನೆ ದರ್ಜೆ
5. ತರಬೇತಿ
   ಕ್ವಾಲಿಟಿ ಇಂಪ್ರೂವ್‌ಮೆಂಟ್ ಪ್ರೋಗ್ರಾಮ್ ಆನ್ ಮಾಡರ್ನ್ ಎಜ್ಯುಕೇಷನ್, ಟಿ.ಟಿ.ಟಿ.ಐ., ಮದ್ರಾಸ್ ಇವರಿಂದ–1981 ಮತ್ತು 1982
6. ಕಲಾ ಸೇವೆ ಮತ್ತು ಅನುಭವ
   1. ಶಿಲ್ಪಕಲಾ ಉಪನ್ಯಾಸಕರಾಗಿ 28 ವರ್ಷಗಳು–ದಿನಾಂಕ 18.12.1969 ರಿಂದ ಇಲ್ಲಿಯವರೆಗೆ
   2. ಮುಖ್ಯಸ್ಥರು, ಶಿಲ್ಪಕಲಾ ವಿಭಾಗ, ವಿಶ್ವವಿದ್ಯಾನಿಲಯ ಲಲಿತಕಲಾ ಮಹಾವಿದ್ಯಾಲಯ, ದಾವಣಗೆರೆ – 13.5.1996ರಿಂದ
7. ಪ್ರಶಸ್ತಿಗಳು ಮತ್ತು ಗೌರವಗಳು
   1. ಕರ್ನಾಟಕ ಲಲಿತಕಲಾ ಅಕಾಡೆಮಿ, ಪ್ರಶಸ್ತಿ ಮತ್ತು ರೂ. 2,000 ನಗದು ಬಹುಮಾನ – 1985ರಲ್ಲಿ
   2. ಮೈಸೂರು ದಸರಾ ಕಲಾಪ್ರದರ್ಶನದಲ್ಲಿ ಮೊದಲ ಬಹುಮಾನ 1975, 1977, 1979 ಮತ್ತು 1983

3. ಅಖಿಲಭಾರತ 50ನೇ ಕನ್ನಡ ಸಾಹಿತ್ಯ ಸಮ್ಮೇಳನ, ನವದೆಹಲಿಯ ಎರಡನೇ ನಗದು ಬಹುಮಾನ – 1978ರಲ್ಲಿ
4. ಅಖಿಲ ಭಾರತ ಲಲಿತಕಲಾ ಪ್ರದರ್ಶನ, ವಿಜಯ ಲಲಿತಕಲಾ ಸಂಸ್ಥೆ, ಗದಗ ಇವರಿಂದ 1991 ಧಾರವಾಡದಲ್ಲಿ
5. ಗೌರವ ಪ್ರಶಸ್ತಿ ಮತ್ತು ಬಹುಮಾನ, ಲಯನ್ಸ್ ಕ್ಲಬ್, ದಾವಣಗೆರೆ–1988
6. ಎರಡನೇ ಬಹುಮಾನ – ಲಯನ್ಸ್ ಕ್ಲಬ್, ಧಾರವಾಡ ಕಲಾಪ್ರದರ್ಶನ ದಲ್ಲಿ 1976ರಲ್ಲಿ

8. ಸನ್ಮಾನ ಮತ್ತು ಮಾನಪತ್ರ

1. ಶ್ರೀ ರಾಘವೇಂದ್ರ ಸ್ವಾಮಿಗಳು, ಬಸವಾಪಟ್ಟಣ ಇವರ ಸಮ್ಮುಖದಲ್ಲಿ ಹಾನಗಲ್ – 1978ರಲ್ಲಿ
2. ನಗರಸಭೆ, ದಾವಣಗೆರೆ – 1987, ರಾಷ್ಟ್ರನಾಯಕ ಶ್ರೀ ಎಸ್. ನಿಜಲಿಂಗಪ್ಪನವರಿಂದ
3. ವಿಜಯ ಕಲಾಮಂದಿರ, ಗದಗ್ – ಅಧ್ಯಕ್ಷರು, ನಗರಸಭೆ, ಗದಗ್ ಇವರಿಂದ – 1984
4. ಸರ್ಕಾರಿ ಚಿತ್ರಕಲಾ ಮಹಾ ವಿದ್ಯಾಲಯ, ದಾವಣಗೆರೆ – ಶ್ರೀ ಸೋಮಶೇಖರ ಸಾಲಿ, ಅಧ್ಯಕ್ಷರು, ಲಲಿತಕಲಾ ಅಕಾಡೆಮಿ, ಬೆಂಗಳೂರು ಇವರಿಂದ – 1987
5. ದೇವನಗಿರಿ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘ, ದಾವಣಗೆರೆ – 1985
6. ವಿಶ್ವಕರ್ಮ ಯುವ ಸಮಿತಿ, ದಾವಣಗೆರೆ – 17.9.1993
7. ಓಂ ಯುವಕ ಸಂಘ, ದಾವಣಗೆರೆ – 23.9.1993 – ಗಣೇಶೋತ್ಸವ ಸಮಾರಂಭದಲ್ಲಿ
8. 50ನೇ ಸ್ವಾತಂತ್ರೋತ್ಸವ ಅಂಗವಾಗಿ ವಿಶ್ವಕರ್ಮ ಯುವ ಸಮಿತಿ, ದಾವಣಗೆರೆ – 15.8.1997

9. ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನಗಳು

ಕರ್ನಾಟಕದ ವಿವಿಧ ಸ್ಥಳಗಳಲ್ಲಿ 15 ಚಿತ್ರ ಮತ್ತು ಶಿಲ್ಪಕಲಾ ಪ್ರದರ್ಶನಗಳನ್ನು ಏರ್ಪಡಿಸಿದೆ.

10. ಕಲಾಶಿಬಿರಗಳು ಮತ್ತು ಕಲಾ ಕಾರ್ಯಾಗಾರ

1. ಹಿಂದುಳಿದ ಬುಡಕಟ್ಟಿಗೆ ಸಂಬಂಧಿಸಿದ ಜನಾಂಗದ ಕಲೆಯ ಶಿಲ್ಪಕಲಾ ಶಿಬಿರ – ಮಧ್ಯಪ್ರದೇಶದ ಬಸ್ತಾರ್ (ಜಗದಾಳೆಪೂರ್) ದಕ್ಷಿಣ ಮಧ್ಯವಲಯ ಸಾಂಸ್ಕೃತಿಕ ಕೇಂದ್ರ, ನಾಗಪೂರ – ಇವರಿಂದ 1989
2. ದಕ್ಷಿಣ ಭಾರತ ಸೆರಾಮಿಕ್ಸ್ ಶಿಬಿರ, ಮದ್ರಾಸ್ – ಕೇಂದ್ರ ಲಲಿತಕಲಾ ಅಕಾಡೆಮಿ ರೀಜನಲ್ ಸೆಂಟರ್, ಮದ್ರಾಸ್ ಇವರಿಂದ – 1983 ಮತ್ತು 1988
3. ಕರ್ನಾಟಕ ಲಲಿತಕಲಾ ಅಕಾಡೆಮಿಯ ಬೆಳ್ಳಿ ಹಬ್ಬದಲ್ಲಿ ತೈಲ ಚಿತ್ರ ರಚನೆ – 1988
4. ನೆಹರೂ ಜನ್ಮಶತಾಬ್ದಿ ಅಂಗವಾಗಿ ಶಿಲ್ಪಿಗಳ ಶಿಬಿರ, ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ

ನಿರ್ದೇಶನಾಲಯ, ಬೆಂಗಳೂರು ಇವರಿಂದ 1989ರಲ್ಲಿ

5. ಅಖಿಲ ಭಾರತ ಶಿಲ್ಪಿಗಳ ಶಿಬಿರ, ಬೆಂಗಳೂರು, ಕರ್ನಾಟಕ ಚಿತ್ರಕಲಾ ಪರಿಷತ್, ಬೆಂಗಳೂರು ಇವರಿಂದ 1980ರಲ್ಲಿ
6. ಸೆರಾಮಿಕ್ಸ್ ಶಿಬಿರ, ಶ್ರೀ ಕೋಲಿನ್ ಕೇಲಮ್, ಇಂಗ್ಲೆಂಡ್ ಇವರ ಮಾರ್ಗದರ್ಶನದಲ್ಲಿ ಬ್ರಿಟಿಷ್ ಕೌನ್ಸಿಲ್, ಮದ್ರಾಸ್ ಇವರಿಂದ 1985ರಲ್ಲಿ
7. ಅಖಿಲಭಾರತ ಕಂಚು ಪ್ರತಿಮೆಗಾರರ ಶಿಲ್ಪಕಲಾ ಶಿಬಿರ 1995 – ಗುಲ್ಬರ್ಗಾ ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರ, ನಾಗಪೂರ ಇವರಿಂದ
8. ಶಿಲ್ಪಿಗಳ ಶಿಬಿರ, ಶಿವಾರಪಟ್ಟಣ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಮತ್ತು ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರ, ತಂಜಾವೂರು ಇವರಿಂದ 1996 – ಕಲ್ಲಿನ ವಿಗ್ರಹ
9. ಕಲಾ ಮಹೋತ್ಸವ, ಕರ್ನಾಟಕ ಚಿತ್ರಕಲಾ ಪರಿಷತ್, ಬೆಂಗಳೂರು ಇವರ ಆಶ್ರಯದಲ್ಲಿ – 1984ರಲ್ಲಿ
10. ಜಲವರ್ಣ ಕಲಾ ಶಿಬಿರ, ನಂದಿಬೆಟ್ಟ – 1991
11. ಟೆರಾಕೋಟ್ ಕಲಾ ಕಾರ್ಯಾಗಾರ, ರಾಮನಗರ, ಜಾನಪದಲೋಕ, ಬೆಂಗಳೂರು – 1995, ಭಾರತ ಸರ್ಕಾರದ ಪ್ರಾದೇಶಿಕ ವಿನ್ಯಾಸ ಮತ್ತು ತಾಂತ್ರಿಕ ಅಭಿವೃದ್ಧಿ ಕೇಂದ್ರ, ಬೆಂಗಳೂರು
12. "ರಾಜ್ಯ ಕಲಾವಿದರ ಶಿಬಿರ", ಮಡಿಕೇರಿ, ಕರ್ನಾಟಕ ಲಲಿತಕಲಾ ಅಕಾಡೆಮಿ ಇವರಿಂದ 1993
13. ಚಿತ್ರದುರ್ಗ ಉತ್ಸವ – 1991
14. ರಾಷ್ಟ್ರೀಯ ಜಾನಪದ ಕಲಾವಿದರ ಶಿಬಿರ, ಮಥುರಾ, ಉತ್ತರ ಪ್ರದೇಶ, ಅಂತಾರಾಷ್ಟ್ರೀಯ ವಿನಿಮಯ ಕಾರ್ಯಕ್ರಮ, ಉತ್ತರ ಮಧ್ಯವಲಯ ಸಾಂಸ್ಕೃತಿಕ ಕೇಂದ್ರ, ಅಲಹಾಬಾದ್ – 1997
15. ಮುಖವಾಡಗಳ ಕಾರ್ಯಾಗಾರ, ಪೂನಾ, ದಕ್ಷಿಣ ಮಧ್ಯವಲಯ ಸಾಂಸ್ಕೃತಿಕ ಕೇಂದ್ರ, ನಾಗಪೂರ ಇವರಿಂದ 1998

11. ರಾಷ್ಟ್ರೀಯ ಮತ್ತು ರಾಜ್ಯದಲ್ಲಿ ಭಾಗವಹಿಸಿದ ಕಲಾ ಪ್ರದರ್ಶನಗಳು

1. ಕೇಂದ್ರ ಲಲಿತಕಲಾ ಅಕಾಡೆಮಿ ಮತ್ತು ರಾಜ್ಯ ಲಲಿತಕಲಾ ಅಕಾಡೆಮಿಯ ಪ್ರಶಸ್ತಿ ವಿಜೇತ ಕಲಾವಿದರ ಕಲಾಪ್ರದರ್ಶನ – ಕೇಂದ್ರ ಲಲಿತಕಲಾ ಅಕಾಡೆಮಿ ರೀಜನಲ್ ಸೆಂಟರ್, ಮದ್ರಾಸ್ ಇವರಿಂದ – ಮದ್ರಾಸ್, ಕಲ್ಕತ್ತಾ, ಲಖನೌ, ಭುವನೇಶ್ವರಿ – 1989ರಲ್ಲಿ
2. ಅಂತರರಾಜ್ಯ ವಿನಿಮಯ ಕಲಾಪ್ರದರ್ಶನ, ಸಿಮ್ಲಾ, ಹಿಮಾಚಲಪ್ರದೇಶ, ಅಕಾಡೆಮಿ ಆಫ್ ಆರ್ಟ್ಸ್, ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರ, ತಂಜಾವೂರು, ಕರ್ನಾಟಕ ಲಲಿತಕಲಾ ಅಕಾಡೆಮಿ

ಇವರ ಸಹಯೋಗದೊಂದಿಗೆ – 1992 (4.5.1992)

3. ಮುಂಬಯಿ ಆರ್ಟ್ ಸೊಸೈಟಿ, 92ನೇ ಕಲಾ ಪ್ರದರ್ಶನ – 1984
4. ಕರ್ನಾಟಕ ಲಲಿತಕಲಾ ಅಕಾಡೆಮಿ, ಕಲಾ ಪ್ರದರ್ಶನಗಳು – 1976ರಿಂದ
5. ಮೈಸೂರು ದಸರಾ ಕಲಾ ಪ್ರದರ್ಶನಗಳು – 1970ರಿಂದ
6. ಅಖಿಲಭಾರತ ಕಿರುರೂಪ ಚಿತ್ರಕೃತಿಗಳ ಪ್ರದರ್ಶನ, ಗುಲ್ಬರ್ಗಾ –1992
7. 61ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ದಾವಣಗೆರೆ – 1992
8. ಪ್ರಾಚ್ಯ ಮತ್ತು ವಾಸ್ತುಶಿಲ್ಪ ವಸ್ತುಸಂಗ್ರಹಾಲಯ ಇಲಾಖೆಯ ಪ್ರದರ್ಶನಗಳು 1976 ಮತ್ತು 1977
9. ಕರ್ನಾಟಕ ಜಾನಪದ ಕಲಾ ಪ್ರದರ್ಶನ – 1982
10. ಕರ್ನಾಟಕ ಚಿತ್ರಕಲಾವಿದರ ಸಮ್ಮೇಳಣ – 1968 ಮತ್ತು 1984
11. ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ – 1974
12. ಶಿಲ್ಪಕಲಾ ಪ್ರದರ್ಶನ, ರೋಟರಿ ಕ್ಲಬ್, ದಾವಣಗೆರೆ – 1976
13. ಹುಬ್ಬಳ್ಳಿ–ಧಾರವಾಡ ಕಾರ್ಪೊರೇಷನ್ ರಾಜ್ಯಮಟ್ಟದ ಚಿತ್ರಕಲಾ ಪ್ರದರ್ಶನ – 1983
14. ಅಖಿಲ ಭಾರತ ವಿಶ್ವಕರ್ಮ ಮಹಾಸಭಾ, ಕಲ್ಕತ್ತಾ 1973
15. ಅಖಿಲ ಭಾರತ ವೀರಶೈವ ಮಹಾಸಭಾ, ಬೆಂಗಳೂರು – 1973
16. ಶ್ರೀ ಧರ್ಮಸ್ಥಳ ಮಂಜಯ್ಯ ಹೆಗಡೆ ಜನ್ಮಶತಾಬ್ಧಿಯ ರಾಜ್ಯಮಟ್ಟದ ಚಿತ್ರಕಲಾ ಪ್ರದರ್ಶನ, ಮಂಗಳೂರು – 1990
17. ಕಲಾ ಮಹೋತ್ಸವ, ಬೆಂಗಳೂರು – 1984, 1990
18. ರೇನ್‌ಬೋ ಆರ್ಟ್ ಕೌನ್ಸಿಲ್, ಧಾರವಾಡ – 1983
19. ಕನ್ನಡ ವಿಶ್ವವಿದ್ಯಾಲಯ, ಹಂಪಿ – 1992
20. ಅಖಿಲ ಭಾರತ ಕಲಾ ಪ್ರದರ್ಶನ, ವಿಜಾಪುರ – 1994
21. 8ನೇ ಅಂತಾರಾಷ್ಟ್ರೀಯ ಕಲಾ ಪ್ರದರ್ಶನ (ಟ್ರಿಸಾಲ್), ದೆಹಲಿ ಮತ್ತು 7ನೇ ರಾಷ್ಟ್ರೀಯ ಕಲಾ ಮೇಳ, ದೆಹಲಿ – 1994, ಭೇಟ್ಟಿ

12. ಕಲಾಕೃತಿಗಳ ಸಂಗ್ರಹಗಳು (ಶಿಲ್ಪ ಮತ್ತು ಚಿತ್ರಗಳು)

1. ನ್ಯಾಷನಲ್ ಅಕಾಡೆಮಿ ಆಫ್ ಆರ್ಟ್, ರೀಜನಲ್ ಸೆಂಟರ್, ಮದ್ರಾಸ್
2. ದಕ್ಷಿಣ ಮಧ್ಯವಲಯ ಸಾಂಸ್ಕೃತಿಕ ಕೇಂದ್ರ, ನಾಗಪೂರ್
3. ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು
4. ಕರ್ನಾಟಕ ಸರ್ಕಾರದ ಪ್ರಾಚ್ಯ ಮತ್ತು ವಾಸ್ತುಶಿಲ್ಪ, ವಸ್ತುಸಂಗ್ರಹಾಲಯ, 1979, ಜಲವರ್ಣ

ಕಲಾಕೃತಿ

5. ಶಾಂತಿ ಸಂದೇಶ ಶಿಲ್ಪಕೃತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು
6. ಗೀತಾ ಮಂದಿರ, ದಾವಣಗೆರೆ

   ಅ) ಸೂರ್ಯ ಭಗವಾನ್ 30x20 ಅಡಿ ರಿಲೀಫ್ ಶಿಲ್ಪಕೃತಿ

   ಆ) ಗೀತೋಪದೇಶ 14x18 ಅಡಿ ರಿಲೀಫ್ ಶಿಲ್ಪಕೃತಿ

   ಇ) ವಿಶ್ವರೂಪದರ್ಶನ 14x18 ಅಡಿ ರಿಲೀಫ್ ಶಿಲ್ಪಕೃತಿ
7. ದಾವಣಗೆರೆ ನಗರದ ಸರ್ಕಲ್‌ಗಳಲ್ಲಿ ಚಾಮರಾಜ ಒಡೆಯರ್, ಡಾ. ಬಿ.ಆರ್. ಅಂಬೇಡ್ಕರ್, ಜಯಪ್ರಕಾಶ್ ನಾರಾಯಣ್ ಮತ್ತು ಜಗಜ್ಯೋತಿ ಬಸವೇಶ್ವರರ ಕೃತಿಗಳು
8. "ಸಿಂಹಗಳ ಕುಟುಂಬ" ವಿಶ್ವೇಶ್ವರಯ್ಯ ಪಾರ್ಕ್, ದಾವಣಗೆರೆಯಲ್ಲಿ ಉದ್ಯಾನ ಶಿಲ್ಪಕೃತಿ (ಲೈಫ್ ಸೈಜ್)
9. ಕರ್ನಾಟಕ ಚಿತ್ರಕಲಾ ಪರಿಷತ್, ಬೆಂಗಳೂರು
10. ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು
11. ಕರ್ನಾಟಕ ಮೆಡಿಕಲ್ ಕಾಲೇಜು, ಹುಬ್ಬಳ್ಳಿ – ಶಿಲ್ಪಕೃತಿ
12. ಸಾರ್ವಜನಿಕ ಆಸ್ಪತ್ರೆ, ದಾವಣಗೆರೆ – ಶಿಲ್ಪಕೃತಿ
13. ವಿಜಯ ಕಲಾ ಮಂದಿರ – ಗದಗ
14. ಸರ್ಕಾರಿ ತಾಂತ್ರಿಕ ಶಿಕ್ಷಣ ವಿದ್ಯಾಲಯ, ದಾವಣಗೆರೆ, ಬೆಳಗಾಂ ಮತ್ತು ತುಮಕೂರು
15. ಶ್ರೀ ಶಾರದ ಕಲ್ಯಾಣ ಮಂಟಪ, ಬೆಂಗಳೂರು – "ಶ್ರೀನಿವಾಸ ಕಲ್ಯಾಣ" ಸೈಜ್ 10'x35' ಅಡಿ – ರಿಲೀಫ್ ಶಿಲ್ಪಕೃತಿ
16. ಶ್ರೀ ಮರುಳಸಿದ್ಧ ಸ್ವಾಮೀಜಿಗಳು, "ಕ್ಯಾನ್‌ವಾಸ್ ಪೇಂಟಿಂಗ್" 4'x6' ಪ್ರಾರ್ಥನಾ ಮಂದಿರ, ಅನುಭವ ಮಂಟಪ, ತರಳಬಾಳು ಜಗದ್ಗುರು ವಸತಿ ಶಾಲೆ, ದಾವಣಗೆರೆ 1991
17. "ಮೆರವಣಿಗೆ" ಜಾನಪದ ಶಿಲ್ಪಕಲಾಕೃತಿ ಸೈಜ್ 8'x120' ಅಡಿ ಅಮಿತ್ ಸಿನಿಮಾ ಚಿತ್ರಮಂದಿರ, ದಾವಣಗೆರೆ – 1992
18. ಕನ್ನಡ ವಿಶ್ವವಿದ್ಯಾನಿಲಯ, ಹಂಪಿ–1992
19. ಶ್ರೀ ತುಕಾರಾಮ್ ಮಹಾರಾಜ್, ಶ್ರೀ ಜ್ಞಾನೇಶ್ವರ, ಶ್ರೀ ನಾಮದೇವ ಮಹಾರಾಜ, ಶ್ರೀ ಸಂತ ಏಕನಾಥ ವಿಠ್ಠಲ ಮಂದಿರ, ದಾವಣಗೆರೆ ಶಿಲ್ಪ ಕೃತಿಗಳು – 1993
20. ಶ್ರೀ 108, ಶ್ರೀ ಸತ್ಯಧ್ಯಾನತೀರ್ಥಸ್ವಾಮೀಜಿ, ಸರ್ವಜ್ಞಾನ ಮಂದಿರ, ದಾವಣಗೆರೆ ಶಿಲ್ಪಕೃತಿ – 1992
21. ಶ್ರೀ ಅನಂತಶಯನ, ಸೈಜ್ 4'x10'x5' ಶ್ರೀ ಲಕ್ಷ್ಮೀರಂಗನಾಥ ದೇವಾಲಯ, ದೇವರಹಳ್ಳಿ, ಚನ್ನಗಿರಿ ತಾಲ್ಲೂಕು 1991 (ಶಿಲ್ಪಕೃತಿ)

22. ವಾಲ್ಮೀಕಿ ಪೇಂಟಿಂಗ್, ಸೈಜ್ 4'x6', ವಾಲ್ಮೀಕಿ ಸೇವಾ ಸಮಿತಿ, ಜಗಳೂರು (ಚಿತ್ರದುರ್ಗ) 1979
23. ಸಂತ ದೇವಾಲಯ (ಚರ್ಚ್), ದಾವಣಗೆರೆ – 1978
24. ಫಿಲ್ಯಾಟೆಲಿಕ್ ಕ್ಲಬ್, ದಾವಣಗೆರೆ (ಸ್ಟಾಂಪ್ ಮಾಡಲ್) – 1978
25. ಲಯನ್ಸ್ ಕ್ಲಬ್, ದಾವಣಗೆರೆ, "ಎಂಬ್ಲಮ್" ಮಾಡೆಲ್ – 1978
26. "ಶ್ರೀಮದ್ ವಿರಾಟ್ ವಿಶ್ವಕರ್ಮ" ಕ್ಯಾನ್‌ವಾಸ್ ಪೇಂಟಿಂಗ್ ಸೈಜ್ 4'x6', ಶ್ರೀ ಕಾಳಿಕಾಂಬ ವಿಶ್ವಕರ್ಮ ಕಲ್ಯಾಣ ಮಂಟಪ, ದಾವಣಗೆರೆ – 1993
27. ದಿ. ನರಸಿಂಗರಾವ್ ದೇಸಾಯಿ 3 ಶಿಲ್ಪಕೃತಿ, ಎನ್.ಡಿ. ಹೈಸ್ಕೂಲ್, ಅಕ್ಕಿಆಲೂರು
28. ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು ಶಿಲಾಶಿಲ್ಪ ಕಲಾಕೃತಿ
29. ಶ್ರೀಮತಿ ಶ್ರೀ ರಘುನಾಥ ಶೇಠ್ ಜ್ಯುವೆಲರ್ಸ್, ಮಂಗಳೂರು (25 ಜಲವರ್ಣ ಕಲಾಕೃತಿಗಳು) ಖರೀದಿ – 1996
30. ಲೀಬೇಕರ್ 731 N ಮೇನ್ ಸ್ಟ್ರೀಟ್, ಲಿಂಡಸ್‌ಬರ್ಗ್, ಅಮೇರಿಕಾ
31. ಉತ್ತರ ಮಧ್ಯವಲಯ ಸಾಂಸ್ಕೃತಿಕ ಕೇಂದ್ರ, ಅಲಹಾಬಾದ್, ಉತ್ತರಪ್ರದೇಶ
32. ಕಲಾಕೃತಿಗಳು, ಪ್ರತಿಷ್ಠಿತರ ಮನೆ ಮನೆಗಳಲ್ಲಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಮತ್ತು ವಿದೇಶಗಳಲ್ಲಿ – ಅಮೇರಿಕಾ, ಇಸ್ರೇಲ್, ಇಟಲಿ, ನಾರ್ವೆ, ಮುಂತಾದುವುಗಳಲ್ಲಿ

13. ಸಮೂಹ ಚಿತ್ರಕಲಾ ಪ್ರದರ್ಶನ

1. ಸೆರಾಮಿಕ್ಸ್ ಕಲಾ ಪ್ರದರ್ಶನ, ರಾಷ್ಟ್ರೀಯ ಲಲಿತಕಲಾ ಅಕಾಡೆಮಿ, ರೀಜನಲ್ ಸೆಂಟರ್, ಮದ್ರಾಸ್–1983
2. ಮಧ್ಯಪ್ರದೇಶದ ಹಿಂದುಳಿದ ಬುಡಕಟ್ಟು ಜನಾಂಗದ ವಿಷಯದ ಮೇಲೆ ಶಿಲ್ಪಕಲಾ ಪ್ರದರ್ಶನ, ದಕ್ಷಿಣ ಮಧ್ಯವಲಯ ಸಾಂಸ್ಕೃತಿಕ ಕೇಂದ್ರ, ನಾಗಪುರ–1989
3. ನೆಹರೂ ಮತ್ತು ಪ್ರಕೃತಿ ಕಲಾ ಪ್ರದರ್ಶನ – ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು–1989
4. ಅಧ್ಯಾಪಕರ ಸಂಘ, ಸರ್ಕಾರಿ ಚಿತ್ರಕಲಾ ವಿದ್ಯಾಲಯ, ದಾವಣಗೆರೆ ಇವರಿಂದ ಬೆಂಗಳೂರು – 1973, ದಾವಣಗೆರೆ – 1977, ಶಿವಮೊಗ್ಗ – 1979, ದಾವಣಗೆರೆ – 1982
5. ದಾಕಹವಿಸ ಕಲಾ ಪ್ರದರ್ಶನ, ಬೆಂಗಳೂರು –1984
6. ಕಲಾಗುರು ಆರ್ಟ್ ಗ್ಯಾಲರಿ, ದಾವಣಗೆರೆ – 1990
7. ಕಲಾ ಮಹೋತ್ಸವ, ಬಿಜಾಪುರ – 1989
8. ನಂದಿಬೆಟ್ಟ ಕಲಾ ಪ್ರದರ್ಶನ – 1991
9. ಜಾನಪದ ಕಲಾ ಪ್ರದರ್ಶನ, ಮಥುರಾ – 1997

10. ಮುಖವಾಡಗಳ ಪ್ರದರ್ಶನ, ಪೂನಾ – 1998

14. ಉಪನ್ಯಾಸ ಮತ್ತು ಪ್ರಾತ್ಯಕ್ಷಿಕೆಗಳು

1. ಕಲಾ ಪರಿಚಯ, ಹೊಸ ರಾಷ್ಟ್ರೀಯ ಶಿಕ್ಷಣ ನೀತಿ, ದಾವಣಗೆರೆ
2. ಎಂ.ಎಂ. ಶಿಕ್ಷಣ ಮಹಾವಿದ್ಯಾಲಯ, ದಾವಣಗೆರೆ
3. ಬಾಪೂಜಿ ಶಿಕ್ಷಣ ಮಹಾವಿದ್ಯಾಲಯ, ದಾವಣಗೆರೆ
4. ವಿಜಯ ಕಲಾ ಮಂದಿರ, ಗದಗ – 1984
5. ಹಂಪೆ, ಬಾದಾಮಿ, ಪಟ್ಟದಕಲ್ಲು, ಐಹೊಳೆ, ಬೇಲೂರು, ಹಳೇಬೀಡು, ಕುದುರೆಮುಖ, ಶ್ರವಣಬೆಳಗೊಳ, ಹೊರನಾಡು, ಮೈಸೂರು, ಶ್ರೀರಂಗಪಟ್ಟಣ, ಸೋಮನಾಥಪುರ, ಕೆ.ಆರ್.ಎಸ್., ಗಂಜಾಂ, ಧರ್ಮಸ್ಥಳ ಕಲಾ ವಿದ್ಯಾರ್ಥಿಗಳಿಗೆ ಕಲಾ ಶಿಬಿರ
6. ವಿದ್ಯಾರ್ಥಿ ಕಲಾ ಶಿಬಿರ, ಚಿತ್ರದುರ್ಗ ಉತ್ಸವದಲ್ಲಿ – 1991
7. ಕಲಾಗುರು ಆರ್ಟ್ ಗ್ಯಾಲರಿ, ದಾವಣಗೆರೆ– 1993

15. ವಿಚಾರಸಂಕೀರ್ಣ

ಹೈದರಾಬಾದ್ ಕರ್ನಾಟಕದ ಹೆಸರಾಂತ ಕಲಾವಿದರ ವಿಚಾರ ಸಂಕೀರ್ಣ, ಗುಲ್ಬರ್ಗಾದಲ್ಲಿ – 1992, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು ಇವರ ಆಶ್ರಯದಲ್ಲಿ

16. ಸ್ತಬ್ಧಚಿತ್ರ

ಎರಡನೇ ಬಹುಮಾನ, ದಾವಣಗೆರೆ ನಗರಸಭೆಯಿಂದ ಏರ್ಪಡಿಸಿದ ಕನ್ನಡ ರಾಜ್ಯೋತ್ಸವ ಮೆರವಣಿಗೆಯಲ್ಲಿ "ಅಮರಶಿಲ್ಪಿ ಜಕಣಾಚಾರ್ಯ" ಸ್ತಬ್ಧಚಿತ್ರಕ್ಕೆ – 1992

